

MAG(2) PRB/CR/70/2022-23 REG NO: KARKAN27951

# ಮುಂಜಾನೆ ವಾರ್ತೆ

ಇ–ಪೇಪರ್: www.munjaneevartheepaper.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ

Volume: 02 Issue: 98 | ಸಂಪುಟ: 02 | ಸಂಚಿಕೆ: 98 | ಪುಟಗಳು: 04 | munjanevarthe | 23 THURSDAY MAY 2024 | 23 ಗುರುವಾರ ಮೇ 2024 | ₹ 2



ಜಾಹೀರಾತಿಗಾಗಿ ಸಂಪರ್ಕಿಸಿ 9663122276

website: munjanevarthe.com



ಹಾಲು ಉತ್ಪಾದಕರಿಗೆ ಸಹಾಯಧನ ಒತ್ತಾಯಿಸಿ ಡಿಸಿಗೆ ಮನವಿ – ವಿವರಪುಟ 02

ಸ್ವಕಾರ ತಾಲೂಕಾ ಎಲ್ಲ ಸರಕಾರಿ ಅಧಿಕಾರಿಗಳ ಪ್ರಗತಿಪರಿಶಿಲನಾ ಸಭೆ – ವಿವರಪುಟ 03

ಯಾವುದೇ ಕ್ಷಣದಲ್ಲಿ ಕಚೇರಿ ಮೇಲ್ಛಾವಣಿ ಬೀಳುವ ಅಪಾಯ...! – ವಿವರಪುಟ 04


ಸಿಲ್ಕ್ ಬೋರ್ಡ್ ಜಂಕ್ಷನ್ ಸಂಚಾರ ದಟ್ಟಣೆಗೆ ಪರಿಹಾರ ರೂಪವಾಗಿ ಈ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಇದಲ್ಲದೇ ಸುಗಮ ಸಂಚಾರಕ್ಕಾಗಿ, ಬಿಟಿಎಂನಿಂದ ಬನಶಂಕರಿ ಕಡೆಗೆ ಹೋಗುವಾಗ, ರಾಘವೇಂದ್ರ ಸ್ವಾಮಿ ಟೆಂಪಲ್ ಸರ್ಕಲ್, ಜಯನಗರ 5ನೇ ಬ್ಲಾಕ್‌ನಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಬೇಡಿಕೆ ಇದ್ದು, ಇಲ್ಲಿ ಅಂಡರ್ ಪಾಸ್ ನಿರ್ಮಿಸಲು ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿದರು. ಒಣಗಿದ ಮರ ಯಾಕೆ ಬಿಟ್ಕೊಂಡಿದ್ದೀರಿ?: ಸಿಟಿ ರೌಂಡ್ಸ್ ವೇಳೆ ರಸ್ತೆ ಬದಿ ಇದ್ದ ಒಣ ಮರಗಳು ಸಿಎಂ ಕಣ್ಣಿಗೆ ಬಿದ್ದವು. ಈ ವೇಳೆ ಗರಂ ಆದ ಸಿಎಂ, ಒಣಗಿದ ಮರ ಯಾಕೆ ಬಿಟ್ಕೊಂಡಿದ್ದೀರಿ.

# ಮಳೆ ಅವಾಂತರಗಳ ಪರಿಶೀಲನೆ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ನಗರ ಪ್ರದಕ್ಷಿಣೆ ಮಾಡಿ ವಿವಿಧೆಡೆ ರಾಜಕಾಲುವೆ ಹೂಳೆತ್ತುವ ಕಾಮಗಾರಿ ವೀಕ್ಷಿಸಿದರು. ಜೊತೆಗೆ ನಾನಾ ಕಾಮಗಾರಿ ಮತ್ತು ಮಳೆಯಿಂದ ಸಮಸ್ಯೆಗಳಿಗೆ ಒಳಗಾಗುವ ಪ್ರದೇಶಗಳಿಗೆ ಭೇಟಿ ನೀಡಿ ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡಿದರು.

ನಾಯಂಡಹಳ್ಳಿ ರಾಜಕಾಲುವೆಯಲ್ಲಿ ಮಳೆಗಾಲ ಪ್ರವಾಹ ಉಂಟಾಗುತ್ತಿದೆ. ಫ್ಲೈಓವರ್ ನಿರ್ಮಿಸಿದ್ದರಿಂದ ರಾಜಕಾಲುವೆಯ ವಿಸ್ತಾರ ಕಡಿಮೆ ಆಗಿದೆ.

ನೀರು ಸರಾಗವಾಗಿ ಹರಿದುಹೋಗಲು ಹೆಚ್ಚುವರಿ ಕಾಲುವೆ ಅಗತ್ಯವಿದೆ. ಏಳುಕೋಟಿ ವೆಚ್ಚದ ಕಾಮಗಾರಿ ಅನುಮೋದನೆಯಾಗಿದ್ದು, ಹಣಕಾಸು ಇಲಾಖೆ ಹಾಗೂ ಕಂದಾಯ ಇಲಾಖೆ ಅನುಮೋದನೆ ಅಗತ್ಯವಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ವಿವರಿಸಿದರು. ಅದರಂತೆ ಹಣಕಾಸು ಇಲಾಖೆ ಹಾಗೂ ಕಂದಾಯ ಇಲಾಖೆ ಅನುಮೋದನೆ ನೀಡಿ, ಕೂಡಲೇ ಬಿಬಿಎಂಪಿಯು ಕಾಮಗಾರಿ ಕೈಗೆತ್ತಿಕೊಳ್ಳಲು ಅನುವು ಮಾಡುವಂತೆ ಎರಡೂ ಇಲಾಖೆಗಳಿಗೆ ಸಿಎಂ ಸೂಚನೆ ನೀಡಿದರು.

ಬಿಟಿಎಂ ಮೆಟ್ರೋ ಸ್ಟೇಷನ್: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರು ನಗರ ಸಂಚಾರ ಸ್ಥಳ ಪರಿಶೀಲನೆ ವೇಳೆ ಬಿಟಿಎಂ ಮೆಟ್ರೋಸ್ಟೇಷನ್‌ಗೆ ಭೇಟಿ ನೀಡಿದರು. ಮೇಲು ಸೇತುವೆ ರಸ್ತೆ ಹಾಗೂ ಮೆಟ್ರೋ ಮಾರ್ಗಗಳೆರಡೂ ಒಂದರ ಮೇಲೊಂದು ಇರುವ ಡಬಲ್ ಡೆಕ್ಕರ್–2ನೇ ಹಂತದ ವ್ಯವಸ್ಥೆಯನ್ನು ಮುಖ್ಯಮಂತ್ರಿಗಳು ಪರಿಶೀಲನೆ ನಡೆಸಿದರು. ಮೂರು ಕಿ.ಮೀ. ಉದ್ದದ ಈ ವ್ಯವಸ್ಥೆಯನ್ನು ವೀಕ್ಷಿಸಿದ ಮುಖ್ಯಮಂತ್ರಿಗಳು, ಸಂಚಾರ ದಟ್ಟಣೆ ನಿವಾರಣೆಗೆ ಈ ಡಬ್ಬಲ್ ಡೆಕರ್ ಮಾದರಿಯನ್ನು ನಗರದ ಇತರ ಭಾಗಗಳಲ್ಲಿಯೂ ಅಳವಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿಲ್ಕ್ ಬೋರ್ಡ್ ಜಂಕ್ಷನ್ ಸಂಚಾರ ದಟ್ಟಣೆಗೆ ಪರಿಹಾರ ರೂಪವಾಗಿ ಈ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಇದಲ್ಲದೇ ಸುಗಮ ಸಂಚಾರಕ್ಕಾಗಿ, ಬಿಟಿಎಂನಿಂದ ಬನಶಂಕರಿ ಕಡೆಗೆ ಹೋಗುವಾಗ, ರಾಘವೇಂದ್ರ ಸ್ವಾಮಿ ಟೆಂಪಲ್ ಸರ್ಕಲ್, ಜಯನಗರ 5ನೇ ಬ್ಲಾಕ್‌ನಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಬೇಡಿಕೆ ಇದ್ದು, ಇಲ್ಲಿ ಅಂಡರ್ ಪಾಸ್ ನಿರ್ಮಿಸಲು ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿದರು.

ಒಣಗಿದ ಮರ ಯಾಕೆ ಬಿಟ್ಕೊಂಡಿದ್ದೀರಿ?: ಸಿಟಿ ರೌಂಡ್ಸ್ ವೇಳೆ ರಸ್ತೆ ಬದಿ ಇದ್ದ ಒಣ ಮರಗಳು ಸಿಎಂ ಕಣ್ಣಿಗೆ ಬಿದ್ದವು. ಈ ವೇಳೆ ಗರಂ ಆದ ಸಿಎಂ, ಒಣಗಿದ ಮರ ಯಾಕೆ ಬಿಟ್ಕೊಂಡಿದ್ದೀರಿ. ಅನಾಹುತ ಆಗ್ಲಿ ಅಂತನಾ ಎಂದು ಸಿಎಂ ಅಧಿಕಾರಿಗಳನ್ನು ಪ್ರಶ್ನಿಸಿದರು. ಬನಶಂಕರಿ 2ನೇ ಹಂತದ ವಿಭಾಗದಲ್ಲಿರುವ 100 ಜಿಣ. ರಸ್ತೆಯ ಒಣಗಿದ ಮರಗಳನ್ನು ತೆರವುಗೊಳಿಸಬೇಕು.

ನಗರದಾದ್ಯಂತ ಇರುವ ಒಣಮರ, ಅಪಾಯಕಾರಿ ಮರಗಳನ್ನು ತೆರವುಗೊಳಿಸಬೇಕು, ನಗರ ಸೌಂದರ್ಯಕ್ಕೆ ಹೆಚ್ಚು ಒತ್ತು ಕೊಡಬೇಕು, ಪದ್ಮನಾಭನಗರ ಫ್ಲೈಓವರ್ ಬಳಿ ಹಾನಿಯಾಗಿರುವ ಫುಟ್ ಪಾತ್ ಶೀಘ್ರವಾಗಿ ದುರಸ್ತಿಗೊಳಿಸಲು ಹಾಗೂ ಮೆಟ್ರೋ ಮತ್ತು ಫ್ಲೈ ಓವರ್ ಕಾಮಗಾರಿಯಿಂದಾಗಿ ಅಲ್ಲಲ್ಲಿ ಹಾಕಲಾಗಿದ್ದ ಡೆಬ್ರಿಸ್‌ಗಳನ್ನು ಆಗಿಂದಾಗಲೇ ತೆರವುಗೊಳಿಸಲು ಸಿಎಂ ಸೂಚನೆ ನೀಡಿದರು.

ಮುಖ್ಯಮಂತ್ರಿಗಳು ನೀಡಿದ ಸೂಚನೆ: ಇಲ್ಲಿನ ಪ್ರವಾಹ ನಿಯಂತ್ರಣಕ್ಕೆ ಜಾಕ್‌ವೆಲ್ ಮೂಲಕ ರಾಜಕಾಲುವೆಯಿಂದ ಹೊರ ಬರುವ ನೀರನ್ನು ಪಂಪ್ ಮಾಡಿ ಮಡಿವಾಳ ಕೆರೆಗೆ ಹರಿಸಲು ಸೂಚನೆ ನೀಡಿದರು. 4.3 ಕೋಟಿ ರೂ ವೆಚ್ಚದ ಈ ಕಾಮಗಾರಿಯನ್ನು ಬೇಗನೆ ಪ್ರಾರಂಭಿಸಲು ಸೂಚಿಸಿದರು.

ಸಿಲ್ಕ್ ಬೋರ್ಡ್, ಹೊಸೂರು ಮುಖ್ಯರಸ್ತೆ: ಮಟ್ರೋ ಕಾಮಗಾರಿಯಿಂದಾಗಿ ಮಳೆನೀರು ಚರಂಡಿ ವಿಸ್ತೀರ್ಣ ಕಡಿಮೆಯಾಗಿ, ಪ್ರವಾಹ ಪರಿಸ್ಥಿತಿ ಉಂಟಾಗುತ್ತಿದೆ.

ಮುಖ್ಯಮಂತ್ರಿಗಳ ಸೂಚನೆ: ಪರಿಹಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡಲು 4.5 ಕೋಟಿ ಕಾಮಗಾರಿ ಅಗತ್ಯವಿದೆ ಹಾಗೂ ಸರ್ಕಾರದ ಉನ್ನತಾಧಿಕಾರ ಸಮಿತಿಯ ಅನುಮತಿ ಅಗತ್ಯವಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿವರಿಸಿದರು.

ಪರ್ಯಾಯ ವ್ಯವಸ್ಥೆಯ ಕಾಮಗಾರಿ ಕೈಗೊಳ್ಳಲು ಸಮ್ಮತಿಸಿದ ಮುಖ್ಯಮಂತ್ರಿಗಳು, ಮುಂದಿನ ಉನ್ನತಾಧಿಕಾರ ಸಮಿತಿ ಸಭೆಯ ಮುಂದೆ ಮಂಡಿಸಲು ಸೂಚಿಸಿದರು. ಜೊತೆಗೆ ಈ ಯೋಜನೆಯನ್ನು ಮುಂದಿನ 10–15 ವರ್ಷಗಳ ಪರಿಣಾಮವನ್ನು ಗಮನದಲ್ಲಿರಿಸಿಕೊಂಡು ಕ್ರಿಯಾ ಯೋಜನೆ ರೂಪಿಸಲು ಸೂಚಿಸಿದರು. ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

## ಆರು ಮಂದಿ ನೀರು ಪಾಲು

**ಬೆಳಗಾವಿ/ಮುಂಬೈ: ಮಹಾರಾಷ್ಟ್ರದಲ್ಲಿ ಭಾರೀ ಗಾಳಿ ಬೀಸಿ ದೋಣಿ ಮುಗುಚಿ ಭೀಕರ ಅವಘಡ ಸಂಭವಿಸಿದ್ದು, ಒಂದು ವರ್ಷದ ಮಗು ಸೇರಿ ಆರು ಮಂದಿ ನೀರು ಪಾಲಾಗಿರುವ ಘಟನೆ ಪುಣೆ ಜಿಲ್ಲೆಯ ಫಾಲಘರ್ ತಾಲೂಕಿನ ಕಲಾಶಿ ಬಳಿ ನಡೆದಿದೆ.**

ಮಹಾರಾಷ್ಟ್ರದ ಪುಣೆ ಜಿಲ್ಲೆಯ ಫಾಲಘರ್ ತಾಲೂಕಿನ ಕಲಾಶಿ ಬಳಿ ದೋಣಿ ಮುಗುಚಿ 6 ಮಂದಿ ನೀರು ಪಾಲಾಗಿದ್ದಾರೆ. ಉಜ್ಜನಿ ಜಲಾಶಯದ ಹಿನ್ನೀರಿನಲ್ಲಿ ಕುಟುಂಬಸ್ಥರು ದೋಣಿ ವಿಹಾರಕ್ಕೆ ತೆರಳಿದ್ದರು.

ಭೀಮಾ ನದಿಗೆ ಅಡ್ಡಲಾಗಿ ಕಟ್ಟಿರುವ ಉಜ್ಜನಿ ಜಲಾಶಯದಲ್ಲಿ ಗೋಕುಳ ಜಾಧವ್(30) ಕೋಮಲ್ ಜಾಧವ್(26) ಶುಭ ಜಾಧವ್(1) ಮಾಹಿ ಜಾಧವ್(3) ನೀರು ಪಾಲಾಗಿದ್ದಾರೆ.

ಇನ್ನು ಅದೇ ದೋಣಿಯಲ್ಲಿ ಮತ್ತಿಬ್ಬರು ವಿಹಾರಿಗಳು ಸಹ ಪಯಣಿಸುತ್ತಿದ್ದು, ಅವರೂ ನೀರು ಪಾಲಾಗಿದ್ದಾರೆ. ಕುಗ್ಗಾಂವ್ ಗ್ರಾಮದ ಅನುರಾಗ್ ಅವಘಡೆ, ಗೌರವ್ ಡೋಂಗರೆ ನೀರುಪಾಲುದವರು. ನೀರುಪಾಲಾಗಿರುವವರ ಹುಡುಕಾಟಕ್ಕೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ದಳ ತಂಡದ ಸಿಬ್ಬಂದಿ ಆಗಮಿಸಿದ್ದಾರೆ. ಸ್ಥಳೀಯ ಪೊಲೀಸರ ಸಹಾಯದೊಂದಿಗೆ ಎನ್ ಡಿ ಆರ್ ಎಫ್ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿಯಿಂದ ಹುಡುಕಾಟ ಮುಂದುವರಿಸಿದ್ದಾರೆ.

## ‘ಬಿಜೆಪಿ ಮೇಲಿನ ದಬ್ಬಾಳಿಕೆ ಸಹಿಸಲಾರೆವು’



ಬೆಂಗಳೂರು: ರಾಜ್ಯದಲ್ಲಿ ಪದೇಪದೇ ಬಿಜೆಪಿ ಮೇಲಿನ ದಬ್ಬಾಳಿಕೆಯನ್ನು ಸಹಿಸಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಎಚ್ಚರಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಶಾಸಕರ ಬಂಧನದ ದುಸ್ಸಾಹಸಕ್ಕೆ ಪೊಲೀಸರು ಮುಂದಾದರೆ ಮುಂದೆ ನಡೆಯುವ ಘಟನೆಗೆ ರಾಜ್ಯ ಸರಕಾರ, ಪೊಲೀಸ್ ಅಧಿಕಾರಿಗಳು ಹೊಣೆ ಹೊರಬೇಕಾಗುತ್ತದೆ ಎಂದು ತಿಳಿಸಿದರು.

ದಕ್ಷಿಣ ಕನ್ನಡದಲ್ಲಿ ಕಾನೂನು– ಸುವ್ಯವಸ್ಥೆ ಸುಗಮವಾಗಿ ಹೋಗುತ್ತಿರುವ ಸಂದರ್ಭದಲ್ಲಿ ನಮ್ಮ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ಮಾಡುವುದನ್ನು ಸಹಿಸಲು ಅಸಾಧ್ಯ ಎಂದು ಅವರು ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದರು. ಪೊಲೀಸರು ಕಾನೂನು– ಸುವ್ಯವಸ್ಥೆ ಹದಗೆಡಲು ಕುಮ್ಮಕ್ಕು ನೀಡುತ್ತಿದ್ದಾರೆ. ಶಾಸಕರ ಮೇಲೆ ಕ್ರಮ ಸಲ್ಲದು; ವಿನಾಕಾರಣ ನಮ್ಮ ಕಾರ್ಯಕರ್ತರ ಮೇಲೆ ಎಫ್‌ಐಆರ್ ದಾಖಲಿಸಿದ್ದು, ಅವರನ್ನು ಬಿಡುಗಡೆ ಮಾಡಿ ಎಂದು ಆಗ್ರಹಿಸಿದರು.

ಇತ್ತೀಚೆಗೆ ಅಕ್ರಮ ಕ್ವಾರಿ ವಿಚಾರವಾಗಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಈ ವಿಚಾರವಾಗಿ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರನ್ನು ಬಂಧನ ಮಾಡಲು ಪೊಲೀಸರು ಪ್ರಯತ್ನ ಮಾಡುತ್ತಿರುವುದು ಖಂಡನೀಯ ಎಂದು ತಿಳಿಸಿದರು.

ಶಾಸಕರ ಬಂಧನ ಪ್ರಯತ್ನದಿಂದ ಉತ್ತಮ ಸಂದೇಶ ರಾಜ್ಯಕ್ಕೆ ಹೋಗುವುದಿಲ್ಲ ಎಂದು ಅವರು ನುಡಿದರು.

ದಕ್ಷಿಣ ಕನ್ನಡ ಮಾತ್ರವಲ್ಲದೆ ರಾಜ್ಯದಾದ್ಯಂತ ಪೊಲೀಸ್ ಅಧಿಕಾರಿಗಳು ಬಿಜೆಪಿ ಕಾರ್ಯಕರ್ತರ ವಿರುದ್ಧ ದೌರ್ಜನ್ಯ ಎಸಗುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕುವಂತೆ ಗೃಹ ಸಚಿವರು ಪೊಲೀಸ್ ವರಿಷ್ಠರ ಜೊತೆ ಮಾತನಾಡಬೇಕು ಎಂದು ಒತ್ತಾಯಿಸಿದರು. ಗುಲ್ಬರ್ಗದಲ್ಲಿ ನಮ್ಮ ಕಾರ್ಯಕರ್ತನ ಹತ್ಯೆ ಆಗಿದೆ. ಚುನಾವಣೆ ಸಂದರ್ಭದಲ್ಲಿ ಕೊಡಗಿನಲ್ಲಿ ನಮ್ಮ ಕಾರ್ಯಕರ್ತನ ಮೇಲೆ ಕಾರು ಹರಿಸಿ ಒಬ್ಬರು ಮರಣ ಹೊಂದಿದ್ದಾರೆ ಎಂದು ಗಮನ ಸೆಳೆದ ಅವರು, ರಾಜ್ಯ ಸರಕಾರ ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದವರನ್ನು ಬಂಧಿಸಲು ಹಿಂದೆ ಮುಂದೆ ನೋಡುತ್ತದೆ ಎಂದು ಟೀಕಿಸಿದರು.

ನಾನು ಮೊನ್ನೆ ಹರೀಶ್ ಪೂಂಜ ಅವರ ಭಾಷಣದ ವಿಡಿಯೋ ಕೇಳಿದ್ದೇನೆ. ಈ ವಿಷಯದಲ್ಲಿ ಶಾಸಕರ ಜೊತೆ ಸವಿಸ್ತಾರವಾಗಿ ಚರ್ಚೆ ಮಾಡಿದ್ದೇನೆ. ಪೊಲೀಸ್ ಅಧಿಕಾರಿಗಳು ಮರೆಮಾಚುವ ಕೆಲಸ ಮಾಡುತ್ತಿದ್ದಾರೆ. ಅಕ್ರಮ ಕ್ವಾರಿ ಮಾಡುವವರ ವಿರುದ್ಧ ಎಫ್‌ಐಆರ್, ಕ್ರಮದ ವಿಚಾರದಲ್ಲಿ ನಮ್ಮದು, ಶಾಸಕರದ್ದಾಗಲೀ ತಕರಾರಿಲ್ಲ. ಎಫ್‌ಐಆರ್‌ನಲ್ಲಿ ನಮ್ಮ ಪಕ್ಷದ ಯುವಮುಖಂಡ ಶಶಿರಾಜ್ ಅವರ ಹೆಸರನ್ನು ಸೇರಿಸುವ ಪಿತೂರಿಯನ್ನು ಪೊಲೀಸ್ ಅಧಿಕಾರಿಗಳು ಮಾಡಿದ್ದಾಗಿ ಆಕ್ಷೇಪ ವ್ಯಕ್ತಪಡಿಸಿದರು.

ನಮ್ಮ ಶಾಸಕ ಹರೀಶ್ ಪೂಂಜ ಅವರು ಪೊಲೀಸ್ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದಾಗ, ‘ಇಲ್ಲ ಯಾವುದೇ ಕಾರಣಕ್ಕೂ ಶಶಿರಾಜ್ ಅವರ ಹೆಸರಿಲ್ಲ ಎಂದು ಸುಳ್ಳು ಹೇಳಿದ್ದರು.

ಅಕ್ರಮ ಕಲ್ಲು ಕ್ವಾರಿಯಲ್ಲಿ ಪಾತ್ರ ಇಲ್ಲದಿದ್ದರೂ ಸೇಡು ತೀರಿಸುವ ನಿಟ್ಟಿನಲ್ಲಿ ಯುವಮೋರ್ಚಾ ಅಧ್ಯಕ್ಷ ಶಶಿರಾಜ್ ಹೆಸರು ಸೇರಿಸಿದ್ದಾರೆ. ಬಳಿಕ ರಾತ್ರೋರಾತ್ರಿ ಬಂಧಿಸಿದ್ದು, ಅದರ ವಿರುದ್ಧ ನಮ್ಮ ಶಾಸಕರು ಪೊಲೀಸ್ ಠಾಣೆಗೆ ಹೋಗಿ ಪ್ರಶ್ನೆ ಮಾಡಿದ್ದು ಸತ್ಯ’ ಎಂದು ವಿವರಿಸಿದರು.

ನಮ್ಮ ಕಾರ್ಯಕರ್ತರ ವಿರುದ್ಧ ಸೇಡಿನ ಎಫ್‌ಐಆರ್ ದಾಖಲಿಸಿ ದೌರ್ಜನ್ಯ ಮಾಡುವುದರ ವಿರುದ್ಧ ನಮ್ಮ ಶಾಸಕ ಠಾಣೆಗೆ ಹೋಗಿ ನಮ್ಮ ಕಾರ್ಯಕರ್ತರಿಗೆ ಶಕ್ತಿ ತುಂಬುವ ಕೆಲಸವನ್ನು ಮಾಡಿದ್ದಾರೆ.

ಬಳಿಕ ಹೋರಾಟಕ್ಕೂ ಕರೆ ಕೊಟ್ಟಿದ್ದು ಸತ್ಯ. ಪೊಲೀಸ್ ಅಧಿಕಾರಿಗಳು ಚುನಾವಣೆ ನೀತಿ ಸಂಹಿತೆಯ ನೆಪವೊಡ್ಡಿ ಹೋರಾಟ ಹತ್ತಿಕ್ಕುವ ಕೆಲಸ ಮಾಡಿದ್ದಾರೆ. ಇದು ಖಂಡನೀಯ ಎಂದು ತಿಳಿಸಿದರು.

## ಟ್ರಾಫಿಕ್‌ನಿಂದ ಪರದಾಡಿದ ಜನತೆ

*ಬೆಂಗಳೂರು: ಇತ್ತ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಬೆಂಗಳೂರು ಸಿಟಿ ರೌಂಡ್ಸ್ ನಡೆಸಿದರೆ, ಅತ್ತ ಬೆಂಗಳೂರಿಗರು ಟ್ರಾಫಿಕ್ ಜಾಮ್ ಉಂಟಾಗಿ ಜನ ಸಾಮಾನ್ಯರು, ವಾಹನ ಸವಾರರು ಪರದಾಡಿದ್ದಾರೆ.*

*ಸಿಎಂ ಸಿಟಿ ರೌಂಡ್ಸ್ ಹಿನ್ನೆಲೆ ಬೆಂಗಳೂರಿನ ವಿವಿಧೆಡೆ ಸಂಚಾರದಲ್ಲಿ ವ್ಯತ್ಯಯವಾಯಿತು. ಸಿಎಂ ಸಂಚರಿಸಿದ ರಸ್ತೆಗಳಲ್ಲಿ ಬಹಳಷ್ಟು ಟ್ರಾಫಿಕ್ ಜಾಮ್ ಉಂಟಾಯಿತು. ಪ್ರಮುಖವಾಗಿ ಮೈಸೂರು ರಸ್ತೆ, ಬನಶಂಕರಿ ದೇಗುಲ, ಜೆ.ಪಿ.ನಗರ, ದಾಲ್ಮಿಯಾ ಜಂಕ್ಷನ್, ಬನ್ನೇರು ಘಟ್ಟ ರಸ್ತೆ, ವಿಜಯಾ ಬ್ಯಾಂಕ್ ಲೇಔಟ್, ಕೋಡಿಚಿಕ್ಕನಹಳ್ಳಿ, ಹೊಸೂರು ರಸ್ತೆ, ಸಿಲ್ಕ್ ಬೋರ್ಡ್ ಜಂಕ್ಷನ್ ನಲ್ಲಿ ಟ್ರಾಫಿಕ್ ಜಾಮ್ ಆಗಿ ಜನರು ಸಂಕಟ ಅನುಭವಿಸಿದರು.*

*ರಸ್ತೆಗಳಲ್ಲಿ ಉದ್ದನೆಯ ಟ್ರಾಫಿಕ್ ಜಾಮ್ ಉಂಟಾಗಿ ವಾಹನ ಸವಾರರು ಪರದಾಡಬೇಕಾಯಿತು. ಸಿಎಂ ಸಿದ್ದರಾಮಯ್ಯ ಹೋಗುವ ರಸ್ತೆಗಳಲ್ಲಿ ಜೀರೋ ಟ್ರಾಫಿಕ್ ಮಾಡಿರುವ ಕಾರಣ ಸಾರ್ವಜನಿಕ ವಾಹನಗಳ ಓಡಾಟಕ್ಕೆ ನಿರ್ಬಂಧ ಹೇರಲಾಗಿತ್ತು. ಸುಮಾರು ಅರ್ಧ ತಾಸಿಗೂ ಹೆಚ್ಚು ಕಾಲ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಆಗಿ ಜನರು ಸಂಚರಿಸಲು ವಿಳಂಬ ಆಯಿತು.*

*ಜೆ.ಪಿ.ನಗರ, ದಾಲ್ಮಿಯಾ ಜಂಕ್ಷನ್, ಬನ್ನೇರು ಘಟ್ಟ ರಸ್ತೆ, ವಿಜಯಾ ಬ್ಯಾಂಕ್ ಲೇಔಟ್, ಕೋಡಿಚಿಕ್ಕನಹಳ್ಳಿ, ಹೊಸೂರು ರಸ್ತೆ, ಸಿಲ್ಕ್ ಬೋರ್ಡ್ ಜಂಕ್ಷನ್ ನಲ್ಲಿ ಸಂಚಾರ ನಡೆಸಿದರು. ಸಾಮಾನ್ಯವಾಗಿ ವಾಹನದಟ್ಟಣೆ ಇರುವ ಈ ರಸ್ತೆಗಳಲ್ಲಿ ಸಿಎಂ ಸಿಟಿ ರೌಂಡ್ಸ್ ಮಾಡಿದ್ದರಿಂದ ಹೆಚ್ಚಿನ ಟ್ರಾಫಿಕ್ ಜಾಮ್ ಕಂಡು ಬಂದಿತು.*

## ‘ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಲೋಪವಾಗಿಲ್ಲ’



ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ ನಿರ್ವಹಣೆಯಲ್ಲಿ ಸರ್ಕಾರದ ಕಡೆಯಿಂದ ಯಾವುದೇ ಲೋಪವಾಗಿಲ್ಲ ಮತ್ತು ವಿಶೇಷ ತನಿಖಾ ತಂಡವು ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದೆ ಎಂದು ಗೃಹ ಸಚಿವ ಜಿ ಪರಮೇಶ್ವರ ಹೇಳಿದ್ದಾರೆ.

ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿತದ ಬಗ್ಗೆ ವಿರೋಧ ಪಕ್ಷಗಳ ಆರೋಪಗಳನ್ನು ತಳ್ಳಿಹಾಕಿದ ಗೃಹ ಸಚಿವರು, ರಾಜ್ಯ ಪೊಲೀಸರನ್ನು ಸಮರ್ಥಿಸಿಕೊಂಡರು, ಅವರು “ಒಳ್ಳೆಯ ಕೆಲಸ ಮಾಡಿದ್ದಾರೆ. “ಈ ಪ್ರಕರಣವನ್ನು (ಪ್ರಜ್ವಲ್ ರೇವಣ್ಣ) ಎಲ್ಲಾ ಆಯಾಮಗಳಿಂದ ಎಸ್‌ಐಟಿ ಗಂಭೀರವಾಗಿ ತನಿಖೆ ನಡೆಸುತ್ತಿದೆ ಮತ್ತು ಅವರು ಸಾಕಷ್ಟು ಸಮರ್ಥರಾಗಿದ್ದಾರೆ ಎಂದರು.

ಈ ಪ್ರಕರಣದ ಬಗ್ಗೆ ತಿಳಿದ ಕ್ಷಣ ನಾವು ಅದನ್ನು ಮೊದಲು ಸಿಐಡಿಗೆ ಒಪ್ಪಿಸಿ ನಂತರ ಪರಿಸ್ಥಿತಿಯ ಗಂಭೀರತೆಯನ್ನು ನೋಡಿಕೊಂಡು ಎಸ್‌ಐಟಿ ರಚಿಸಿದ್ದೇವೆ.

ಸರ್ಕಾರದ ಕಡೆಯಿಂದ ಯಾವುದೇ ಲೋಪವಾಗಿಲ್ಲ. ಇಲ್ಲಿ ಗುಪ್ತಚರ ವಿಫಲವಾದರೆ, ಕೇಂದ್ರ ಗುಪ್ತಚರವೂ ವಿಫಲವಾಗಿದೆ ಏಕೆಂದರೆ ಅವರು ಪ್ರಜ್ವಲ್ ನನ್ನು ದೇಶದಿಂದ ಹಾರಲು ಬಿಟ್ಟರು ಎಂದು ಪರಮೇಶ್ವರ ಹೇಳಿದರು.

ಪಿಟಿಐ ವಿಡಿಯೋಗಳೊಂದಿಗೆ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ಒತ್ತಾಯಿಸಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಪತ್ರ ಬರೆದಿರುವ ಹಿನ್ನೆಲೆಯಲ್ಲಿ ನ್ಯಾಯಾಲಯವು ಪ್ರಜ್ವಲ್ ರೇವಣ್ಣ ವಿರುದ್ಧ ಬಂಧನ ವಾರಂಟ್ ಹೊರಡಿಸಿದೆ.

ಇದು ಅತ್ಯಂತ ಸೂಕ್ಷ್ಮ ಪ್ರಕರಣವಾಗಿದ್ದು, ಪ್ರಜ್ವಲ್ ವಿರುದ್ಧ ದೂರು ದಾಖಲಿಸಲು ಜನರನ್ನು ಒತ್ತಾಯಿಸಲು ಸಾಧ್ಯವಿಲ್ಲ. ನಮಗೆ ಸಾಕಷ್ಟು ವರದಿಗಳು ಬರುತ್ತಿವೆ, ಹಾಸನದಲ್ಲಿ ಜನರು ತಮ್ಮ ಮನೆಗಳಿಂದ ಓಡಿಹೋಗುತ್ತಿದ್ದಾರೆ, ಬಹಳಷ್ಟು ಮಹಿಳೆಯರು ತಮ್ಮ ಮನೆಗಳಲ್ಲಿ ಕಷ್ಟಪಟ್ಟು ಕಷ್ಟಪಡುತ್ತಿದ್ದಾರೆ.

ಈ ವೀಡಿಯೊಗಳಲ್ಲಿ ಕಾಣಿಸಿಕೊಂಡಿರುವ ಮಹಿಳೆಯರು ಸಮಾಜದಲ್ಲಿ ಕೆಲವು ಸ್ಥಾನಗಳನ್ನು ಹೊಂದಿದ್ದಾರೆ, ಅವರೆಲ್ಲರೂ ತಮ್ಮದೇ ಆದ ಕುಟುಂಬದಿಂದ ಪ್ರಶ್ನೆಗೊಳಗಾಗಿದ್ದಾರೆ ಎಂದರು.


ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುವುದು ಈಗ ಮತ್ತಷ್ಟು ಸುಲಭ

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjaneevartheepaper.com

# ಹಾಲು ಉತ್ಪಾದಕರಿಗೆ ಸಹಾಯಧನ ಒತ್ತಾಯಿಸಿ ಡಿಸಿಗೆ ಮನವಿ

ಯಲಹಂಕ : ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿದ್ದ 5 ರು.ಗಳ ಸಹಾಯ ಧನವನ್ನು ಕಳೆದ 9 ತಿಂಗಳಿ ನಿಂದ ಸ್ಥಗಿತಗೊಳಿಸಿದ್ದು, ಕೂಡಲೇ ಸಹಾಯಧನ ಬಿಡುಗಡೆ ಮಾಡುವ ಮೂಲಕ ರೈತರ ಸಂಕಷ್ಟಕ್ಕೆ ಸ್ಪಂದಿಸ ಬೇಕೆಂದು ಒತ್ತಾಯಿಸಿ ಬಿಜೆಪಿ ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಸತೀಶ್ ಕಡತನಮಲೆ, ಬೆಂ.ಉತ್ತರ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಜಿ.ಜೆ.ಮೂರ್ತಿಯವರ ನೇತೃತ್ವದಲ್ಲಿ ಯಲಹಂಕ ಭಾಗದ ರೈತ ಮುಖಂಡರು ಬೆಂ.ನಗರ ಜಿಲ್ಲಾಧಿಕಾರಿ ದಯಾನಂದ್ ಅವರಿಗೆ ಮನವಿ ಸಲ್ಲಿಸಿದರು.

ನಂತರ ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಸತೀಶ್ ಕಡತನಮಲೆ ಮಾತನಾಡಿ 'ರಾಜ್ಯ ಸರ್ಕಾರ ಕಳೆದ 9 ತಿಂಗಳಿನಿಂದ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿದ್ದ ಸಹಾಯಧನವನ್ನು ಸ್ಥಗಿತಗೊಳಿಸಿದ್ದು ಇದರಿಂದ ರಾಜ್ಯದ ಹಾಲು ಉತ್ಪಾದಕರು ಸಂಕಷ್ಟ ಎದುರಿಸುವಂತಾಗಿದೆ.

ಜತೆಗೆ ರೈತ ಉತ್ಪಾದಕ ಸಂಸ್ಥೆಗಳ ಖಾತೆಗೆ ನೇರವಾಗಿ ವರ್ಗಾವಣೆ ಮಾಡುತ್ತಿದ್ದ ಸಹಾಯ ಧನ ಮತ್ತು ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯ ಮೂಲಕ ರೈತರಿಗೆ ನೀಡಬೇಕಾದ ಸಬ್ಸಿಡಿ ಹಣವನ್ನು ಸಹ ಬಿಡುಗಡೆ ಮಾಡಿಲ್ಲ, ಇದರಿಂದ ರಾಜ್ಯದ ರೈತರು ಸಂಕಷ್ಟಕ್ಕೆ ಒಳಗಾಗಿದ್ದು, ಕೃಷಿ ಚಟುವ ಟಿಕೆ ಕೈಗೊಳ್ಳಲು ನಿರಾಸಕ್ತಿ ಮೂಡುವಂತಾಗಿದೆ, ಈ ದಿಸೆಯಲ್ಲಿ ರಾಜ್ಯ ಸರ್ಕಾರ ಕೂಡಲೇ ಸಹಾಯಧನ ಮತ್ತು ಸಬ್ಸಿಡಿ ಹಣ ಬಿಡುಗಡೆ ಮಾಡುವ ಮೂಲಕ ರೈತರಿಗೆ ಸ್ಪಂದಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.



ಬೆಂ.ಉತ್ತರ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಜಿ.ಜೆ. ಮೂರ್ತಿ ಮಾತನಾಡಿ, 'ರಾಜ್ಯ ಸರ್ಕಾರ ಒಂದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ರೈತರಿಗೆ ಹಲವು ಕೊಡುಗೆಗಳ ಭರವಸೆ ನೀಡಿದ್ದು, ಇದೇ ಸಂತಸದ ವೇಳೆಯಲ್ಲಿ ಹಾಲು ಉತ್ಪಾದಕರ ಸಹಾಯಧನ ಮತ್ತು ರೈತರ ಸಬ್ಸಿಡಿ ಹಣವನ್ನು ಸಹ ಬಿಡುಗಡೆ ಮಾಡುವ ಮೂಲಕ ರೈತರಿಗೆ ನೆರವಾಗಲೆಂಬುದು ನಮ್ಮ ಆಶಯ ವಾಗಿದೆ.

ರೈತ ಮುಖಂಡರು ನೀಡಿದ ಮನವಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಸಾವಕಾಶದಿಂದ ಸ್ವೀಕರಿಸಿ, ಸಹಕರಿಸುವ ಭರವಸೆ ನೀಡಿರುವುದು ಸಂತೋಷ ಉಂಟು ಮಾಡಿದೆ ಎಂದರು.

ರೈತ ಮುಖಂಡರಿಂದ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ದಯಾನಂದ್ ರವರು ಮನವಿಯನ್ನು ಕೂಡಲೇ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ತಲುಪಿಸುವುದರ ಜತೆಗೆ ನಮ್ಮ ಪರವಾಗಿ ರೈತರಿಗೆ ಸ್ಪಂದಿಸಲು ಮನವಿ ಮಾಡುವು ದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಬೆಂ.ಉತ್ತರ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಎಚ್. ಮಂಜುನಾಥ್, ಮಾಲಾರೆಡ್ಡಿ, ಯಲಹಂಕ ಗ್ರಾ. ಮಂಡಲ ರೈತ ಮೋರ್ಚಾ ಅಧ್ಯಕ್ಷ ಎಚ್.ಸಿ.ರಾಜೇಶ್, ಉಪಾಧ್ಯಕ್ಷ ಪಿ.ಕೆ.ರಾಜಣ್ಣ, ಬ್ಯಾಟರಾಯನಪುರ ಗ್ರಾ. ಮಂಡಲ ರೈತ ಮೋರ್ಚಾ ಅಧ್ಯಕ್ಷ ಸತೀಶ್ ಗೌಡ, ರೈತ ಮೋರ್ಚಾ ಮುಖಂಡರಾದ ಸಿಎಲ್‌ಎನ್ ಗೌಡ, ಲಕ್ಷ್ಮಿ, ಡೈರಿ ರಾಜಣ್ಣ, ರೇಣುಕಾಮೂರ್ತಿ, ಆದಿಭೈರವ, ಶರತ್, ಟಿ.ರಾಜು, ರಂಗನಾಥ್, ಮಧು ಸೇರಿದಂತೆ ಇನ್ನಿತರರಿದ್ದರು.

# ಶ್ರೀ ಕೋಟೆ ವೆಂಕಟರಮಣ ಸ್ವಾಮಿ ಬ್ರಹ್ಮರಥೋತ್ಸವ



ಕೆ.ಆರ್.ಪುರ: ಕೃಷ್ಣರಾಜಪುರದ ಪುರಾತನ ಪ್ರಸಿದ್ಧ ಶ್ರೀ ಕೋಟೆ ವೆಂಕಟರಮಣ ಸ್ವಾಮಿ ಬ್ರಹ್ಮರಥೋತ್ಸವ ಅತ್ಯಂತ ವೈಭವದಿಂದ ನಡೆಯಿತು.

ಮಾಜಿ ಸಚಿವ ಭೈರತಿ ಬಸವರಾಜ ವಿಶೇಷ ಪೂಜೆ ನೆರವೇರಿಸಿ, ಕೋಟೆ ವೆಂಕಟರಮಣ ಸ್ವಾಮಿ ಬ್ರಹ್ಮರಥೋತ್ಸವ ಚಾಲನೆ ನೀಡಿದರು.

ಸ್ವಸ್ತಿಶ್ರೀ ಶುಭಕೃತುನಾಮ ಸಂವತ್ಸರ ವೈಶಾಖ ಶುದ್ಧ ನವಮಿ ಪ್ರಕಾರ ಬ್ರಹ್ಮ ರಥೋತ್ಸವ ಪ್ರಯುಕ್ತ ವಿಶೇಷ ಅಭಿಷೇಕ, ಪೂಜೆ,ಅಲಂಕಾರ, ಹೋಮಹವನ, ಮಹಾಮಂಗಳಾರತಿ, ಪ್ರಸಾದ್ ವಿನಿಯೋಗ ಕಾರ್ಯಕ್ರಮಗಳು ನೇರವೇರಿತು.

ಕೆ.ಆರ್.ಪುರದ ಕುಂಬಾರ ಬೀದಿ, ಕಾಲೇಜು ರಸ್ತೆ,ಹಳೆ ಪೋಸ್ಟ್ ಅಫೀಸ್ ರಸ್ತೆ, ಸೇರಿದಂತೆ ಪ್ರಮುಖ ಬೀದಿಗಳಲ್ಲಿ ರಥೋತ್ಸವ ಅದ್ದೂರಿ ಮೆರವಣಿಗೆ ಮಾಡಲಾಯಿತು.

ಮಂಗಳವಾದ್ಯ, ವೀರಗಾಸಿ, ಪೂಜ ಕುಣಿತ, ಬ್ಯಾಂಡ್ ಸೆಟ್ ಕೀಲು ಕುದುರೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೇರವೇರಿತು. ಶ್ರೀ ಕೋಟೆ ವೆಂಕಟರಮಣ ಸ್ವಾಮಿ, ಶ್ರೀ ಕಾಶಿ ವಿಶ್ವೇಶ್ವರ ಸ್ವಾಮಿ ಮತ್ತು ಶ್ರೀ ಕೋಟೆ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ದೇವಸ್ಥಾನಗಳ ಅಭಿವೃದ್ಧಿ ಸೇವಾ ಟ್ರಸ್ಟ್ ಅಧ್ಯಕ್ಷ ಎಲ್ ಮುನಿಸ್ವಾಮಿ, ನಾಗರಾಜಚಾರ್ಯರು, ಮಾಜಿ ಪಾಲಿಕೆ ಸದಸ್ಯ ಅಂತೋಣಿಸ್ವಾಮಿ, ಸಮಿತಿಯ ರಮೇಶ್, ರವಿಕುಮಾರ್, ಶಿವಪ್ಪ, ಮುರಳಿ ಸ್ವಾಮಿ, ಗಜೇಂದ್ರ, ಪದಾಧಿಕಾರಿಗಳು ಉಪಸ್ಥಿತರಿದ್ದರು.

# ವಿಠ್ಠಲಶ್ರೀ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೂಡಲಗಿ : ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ನಾಮದೇವ ಸಿಂಪಿ ಮತ್ತು ಭಾವಸಾರ ಕ್ಷತ್ರಿಯ ಸಮಾಜದ ಸಾಧಕರಿಗೆ ರಾಜ್ಯ ಮಟ್ಟದ ವಿಠ್ಠಲಶ್ರೀ ಪ್ರಶಸ್ತಿ ನೀಡಿ ಗೌರವಿಸಲು ಅರ್ಹ ಸಾಧಕರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಕಲ್ಪ ಕ್ರೀಡಾ ಸಮಾಜ ಸೇವಾ ಸಂಘ ಪ್ರ ಕಾರ್ಯದರ್ಶಿ ಮಂಜುನಾಥ ರೇಳೆಕರ ತಿಳಿಸಿದ್ದಾರೆ.

ಸಮಾಜದವರು ಟೇಲರಿಂಗ್, ಕ್ರೀಡೆ, ವಿಜ್ಞಾನ, ನಾಟಕ, ಸಿನೆಮಾ, ಸಂಗೀತ , ಮಾಧ್ಯಮ, ಕೃಷಿ, ಫ್ಯಾಷನ್ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವವರು ಸಾಧನೆ ಮಾಡಿದ ದಾಖಲೆಗಳ ಝುರಾಕ್ಸ್ ಪಾಸಪೋರ್ಟ್ ಅಳತೆಯ 2 ಫೋಟೋ ಜೊತೆಯಲ್ಲಿ ಜುಲೈ 31ರೊಳಗೆ ಮಂಜುನಾಥ ರೇಳೆಕರ ಮನೆ ನಂ 573 ಗಾಂಧಿ ಚೌಕ, ಅಂಚೆ – 591312 ತಾ, ಮೂಡಲಗಿ, ಜಿಲ್ಲೆ , ಬೆಳಗಾವಿ ಇವರಿಗೆ ಸಲ್ಲಿಸುವುದು ಮಾಹಿತಿಗಾಗಿ, 8867372134,7022095868 ಗೆ ಸಂಪರ್ಕಿಸಬಹುದು.

# ಅಧಿಕೃತ ಶಾಲೆಗಳಿಗಷ್ಟೇ ಮಕ್ಕಳನ್ನು ದಾಖಲಿಸಲು ಬಿಇಓ ಸೂಚನೆ



ತುರುವೇಕೆರೆ: ಮುಂಬರುವ ಶೈಕ್ಷಣಿಕ ವರ್ಷದಲ್ಲಿ ತಮ್ಮ ಮಕ್ಕಳನ್ನು ಶಾಲೆಗಳಿಗೆ ದಾಖಲಿಸಲು ಮುಂದಾಗಿರುವ ಪೋಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಾಲೂಕಿನಲ್ಲಿರುವ ಅಧಿಕೃತ ಶಾಲೆಗಳಿಗೆ ಮಾತ್ರ ಮಕ್ಕಳನ್ನು ದಾಖಲಿಸಬೇಕೆಂದು ಸೂಚನೆ ನೀಡಿದ್ದಾರೆ.

ತುರುವೇಕೆರೆ ಪಟ್ಟಣದಲ್ಲಿರುವ ವಿದ್ಯಾರಣ್ಯ ಆಂಗ್ಲ ಪ್ರಾಥಮಿಕ ಶಾಲೆ, ವಿದ್ಯಾನಗರದ ಶಾರ್ಪ್ ಕಾನ್ವೆಂಟ್, ಡಿ.ಜಿ ರಸ್ತೆಯಲ್ಲಿರುವ ಎಇಎಸ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, ಜೆಪಿ ಆಂಗ್ಲ ಶಾಲೆ, ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಮಯೂರ ಶಾಲೆ, ವಿಶ್ವವಿಜಯ ಆಂಗ್ಲ ಮಾಧ್ಯಮ ವಿದ್ಯಾಶಾಲೆ, ಪ್ರಿಯಾ ಆಂಗ್ಲ ಪ್ರೌಢಶಾಲೆ, ತಾಲೂಕಿನ ಹಡವನಹಳ್ಳಿ ಗೇಟ್‌ನಲ್ಲಿರುವ ದಿಗ್ವಿಜಯ ಟೆಕ್ನೋ ಶಾಲೆ, ಕೊಡಗೀಹಳ್ಳಿ ಗೇಟ್ ಬಳಿ ಇರುವ ಮಾನಸ ಗಾರ್ಡನ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, ಮಾಯಸಂದ್ರದ ಶ್ರೀ ಚಿರಂತನ ಕಾವ್ಯೋದಯ ಹಿರಿಯ ಪ್ರಾಥಮಿಕ ಶಾಲೆ, ಸೌರಭ ಕಾನ್ವೆಂಟ್, ಮಾಯಸಂದ್ರದ ಟಿಬಿ ಕ್ರಾಸ್ ನಲ್ಲಿರುವ ಎಸ್ ಬಿ ಜಿ ಆಂಗ್ಲ ಪ್ರೌಢಶಾಲೆ, ದೊಡ್ಡೇನಹಳ್ಳಿ ಗೇಟ್ ಬಳಿ ಇರುವ ಸೇಂಟ್ ಮೇರಿಸ್ ಆಂಗ್ಲ ಪ್ರೌಢಶಾಲೆ, ಅಮ್ಮಸಂದ್ರದ ಮೈಸೆಂಕೋ ಆಂಗ್ಲ ಶಾಲೆ, ಮಲ್ಲೇನಹಳ್ಳಿಯ ಶ್ರೀ ಗುರುಸಿದ್ದರಾಮೇಶ್ವರ ಕೇಂದ್ರ ಪ್ರೌಢಶಾಲೆ ಇವೆಲ್ಲವೂ ರಾಜ್ಯಪಠ್ಯಕ್ರಮ ಭೋಧಿಸುವ ಶಾಲೆಗಳಾಗಿವೆ.

ಮಾದಿಹಳ್ಳಿಯ ಬದರಿಕಾಶ್ರಮ ವಿದ್ಯಾಶಾಲೆ (ಸಿಬಿಎಸ್‌ಇ), ವಿರಕ್ತ ಮಠದಲ್ಲಿರುವ ಇಂಡಿಯನ್ ಪಬ್ಲಿಕ್ ಸ್ಕೂಲ್ (ಐಸಿಎಸ್‌ಸಿ), ಚಿಮ್ಮನಹಳ್ಳಿಯ ಶ್ರೀ ಮುನೇಶ್ವರ ಗುರುಕುಲ ವಿದ್ಯಾಮಂದಿರ (ಸಿಬಿಎಸ್‌ಇ) ಪಠ್ಯಕ್ರಮ ಭೋದಿಸುವ ಶಾಲೆಗಳಾಗಿವೆ. ಪ್ರಕಟಣೆಯಲ್ಲಿ ನೀಡಲಾಗಿರುವ ಶಾಲೆಗಳು ಮಾತ್ರ ಸರ್ಕಾರದಿಂದ ಗುರುತಿಸಲ್ಪಟ್ಟಿರುವ ಶಾಲೆಗಳಾಗಿವೆ. ಹಾಗಾಗಿ ಎಲ್ಲಾ ಪೋಷಕರು ಈ ಶಾಲೆಗಳಿಗೆ ಮಾತ್ರ ತಮ್ಮ ಮಕ್ಕಳನ್ನು ದಾಖಲಿಸಬೇಕೆಂದು ಬಿಇಓ ಸೋಮಶೇಖರ್ ಸೂಚನೆ ನೀಡಿದ್ದಾರೆ.

# ಶಿಥಿಲವಾಗಿರುವ ಉಪ ನೊಂದಣಾಧಿಕಾರಿಗಳ ರೆಕಾರ್ಡ್ ರೋಂ ಕಟ್ಟಡ

## ಸಾರ್ವಜನಿಕರ ದಾಖಲೆಗಳ ಸಂರಕ್ಷಣೆ ಉಪ ನೊಂದಣಾಧಿಕಾರಿಗಳಿಗೆ ಬಹು ದೊಡ್ಡ ಸವಾಲು

ಕೃಷ್ಣರಾಜಪೇಟೆ: ಪಟ್ಟಣದ ಉಪ ನೊಂದಣಾಧಿಕಾರಿಗಳ ಕಛೇರಿಗೆ ಸೇರಿದ ರೆಕಾರ್ಡ್ ರೋಂ ಕಟ್ಟಡ ಸಂಪೂರ್ಣ ಶಿಥಿಲವಾಗಿದ್ದು ತಾಲೂಕಿನ ಲಕ್ಷಾಂತರ ರೈತರಿಗೆ ಸಂಬಂಧಿಸಿದ ಭೂ ದಾಖಲೆಗಳು ಅಪಾಯಕ್ಕೆ ಸಿಲುಕಿವೆ.

ಪಟ್ಟಣದ ತಾಲೂಕು ಆಡಳಿತ ಸೌಧದ ಆವರಣದಲ್ಲಿ ಉಪ ನೊಂದಣಾಧಿಕಾರಿಗಳ ಕಛೇರಿಯಿದೆ. ನಿತ್ಯ ನೂರಾರು ರೈತರು ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿ ನೊಂದಣಿ ಪ್ರಕ್ರಿಯೆ ಇದೇ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನಡೆಯುತ್ತಿದೆ.

ನೊಂದಣಾಧಿಕಾರಿಗಳ ಹಳೆಯ ಕಛೇರಿ ಶಿಥಿಲಾವಸ್ಥೆಗೆ ತಲುಪಿದ ಕಾರಣ ಉಪ ನೊಂದಣಾಧಿಕಾರಿಗಳ ಕಛೇರಿಯನ್ನು ತಾತ್ಕಾಲಿಕವಾಗಿ ಹಳೆಯ ತಾಲೂಕು ಕಛೇರಿಗೆ ಸ್ಥಳಾಂತರಿಸಲಾಗಿದೆ.

ಮಿನಿ ವಿಧಾನ ಸೌಧವನ್ನು ನಿರ್ಮಿಸಿದ ಅನಂತರ ತೆರವಾದ ಹಳೆಯ ತಾಲೂಕು ಕಛೇರಿಗೆ ಉಪ ನೊಂದಣಾಧಿಕಾರಿಗಳ ಕಛೇರಿಯನ್ನು ಸ್ಥಳಾಂತರಿಸಲಾಗಿದ್ದರೂ ನೊಂದಣಿಯಾದ ಆಸ್ತಿ ಪಾಸ್ತಿಯ ದಾಖಲೆಗಳು ಮಾತ್ರ ಹಳೆಯ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿಯೇ ಉಳಿದಿದ್ದು ಅವುಗಳಿಗೆ ಸೂಕ್ತ ರಕ್ಷಣೆಯ ಕೊರತೆ ಎದುರಾಗಿದೆ.

ಹಳೆಯ ಉಪ ನೊಂದಣಾಧಿಕಾರಿಗಳ ಕಛೇರಿ ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದ್ದು ಹೆಂಚಿನ ತೊಲೆ ಮತ್ತು ರಿಪೀಸ್ ಪಟ್ಟಿಯ ಮರಗಳು ಗೆದ್ದಲು ಹಿಡಿದಿವೆ. ಕಟ್ಟಡದ ಸುತ್ತ ಗಿಡಗೆಂಟೆಗಳು ಬೆಳೆದು ನಿಂತಿವೆ. ಮಳೆ ಬಂದರೆ ಕಟ್ಟಡದೊಳಗೆ ನೀರು ಸೋರಿಕೆಯಾಗುತ್ತಿದೆ. ಸಾರ್ವಜನಿಕರ ದಾಖಲೆಗಳ ಸಂರಕ್ಷಣೆ ಉಪ ನೊಂದಣಾಧಿಕಾರಿಗಳಿಗೆ ಬಹು ದೊಡ್ಡ ಸವಾಲಾಗಿದೆ.

ಜಾಗದ ಸಮಸ್ಯೆ: ಪಟ್ಟಣದ ಹಳೆಯ ತಾಲೂಕು ಕಛೇರಿಯನ್ನು ಮೈಸೂರು ಮಹಾರಾಜರ ಆಳ್ವಿಕೆಯ ಸಂದರ್ಭದಲ್ಲಿ (1895)ರಲ್ಲಿ ನಿರ್ಮಿಸಲಾಗಿದೆ. ತಾಲೂಕು ಕಛೇರಿಯ ಮುಂದಿನ ಜಾಗಕ್ಕೆ ಹೊಂದಿಕೊಂಡಂತೆ ನಂತರದ ಕಾಲಘಟ್ಟದಲ್ಲಿ



ಉಪ ನೊಂದಣಾಧಿಕಾರಿಗಳ ಕಾರ್ಯಾಲಯವನ್ನು ಮಂಗಳೂರು ಹೆಂಚು ಹಾಗೂ ಮದ್ರಾಸ್ ಆರ್.ಸಿ.ಸಿ ಬಳಸಿ ನಿರ್ಮಿಸಲಾಗಿದೆ.

ಕಟ್ಟಡ ಶಿಥಿಲವಾದ ಕಾರಣದಿಂದ ಕಛೇರಿಯನ್ನು ಹಳೆಯ ತಾಲೂಕು ಕಛೇರಿಗೆ ವರ್ಗಾಯಿಸಲಾಗಿದೆ. ಇದೇ ಜಾಗದಲ್ಲಿ ನೂತನ ಉಪ ನೊಂದಣಾಧಿಕಾರಿಗಳ ಕಛೇರಿಯ ನೂತನ ಕಟ್ಟಡ ನಿರ್ಮಿಸಲು ರಾಜ್ಯ ನೊಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು 18–03–2019ರಲ್ಲಿಯೇ 1,27,30,000 ಮೊತ್ತದ ಹಣವನ್ನು ಆಡಳಿತಾತ್ಮಕ ಮಂಜೂರಾತಿ ಪಡೆದು ಅನುಮೋದಿಸಿದ್ದಾರೆ. ಈ ಕುರಿತು ರಾಜ್ಯ ಮುದ್ರಾಂಕ ಇಲಾಖೆ ಇಲ್ಲಿನ ತಹಸೀಲ್ದಾರರಿಗೂ ಲಿಖಿತ ಪತ್ರ ಬರೆದಿದೆ. ಕಟ್ಟಡ ನಿರ್ಮಾಣಕ್ಕೆ ಹಣ ಬಿಡುಗಡೆಯಾಗಿದ್ದರೂ ತಾಲೂಕು ಕಛೇರಿಯ ಆವರಣದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ಕಂದಾಯ ಇಲಾಖೆ ಸಹಕರಿಸುತ್ತಿಲ್ಲ. ಇದು ಪಾರಂಪರಿಕ ಕಟ್ಟಡವಲ್ಲದಿದ್ದರೂ ಹಳೆಯ ತಾಲೂಕು ಕಛೇರಿ ಆವರಣದಲ್ಲಿರುವ ಕಾರಣದಿಂದ ಈ ಕಟ್ಟಡಕ್ಕೂ ಪಾರಂಪರಿಕ ಕಟ್ಟಡದ ಹಣೆಪಟ್ಟಿ ಕಟ್ಟಲಾಗಿದೆ.

ತಾಲೂಕು ಕಛೇರಿಯ ಆವರಣದಲ್ಲಿ ಕಂದಾಯ ಇಲಾಖೆಗೆ ಸೂಕ್ತ ಜಾಗ ನೀಡುವ ಮನಸ್ಸು ಇಲ್ಲದಿದ್ದರೆ ನಾಗಮಂಗಲ ರಸ್ತೆಯಲ್ಲಿ ಅನ್ಯಾಕ್ರಮಣವಾಗಿರುವ ತಹಸೀಲ್ದಾರರ ವಸತಿ ನಿವೇಶನದ ಜಾಗವನ್ನು ಉಪ ನೊಂದಣಾಧಿಕಾರಿಗಳ ಕಛೇರಿ ನಿರ್ಮಾಣಕ್ಕೆ ಹಸ್ತಂತರಿಸಲಿ. ಸರ್ಕಾರಿ ಜಾಗದಲ್ಲಿ ಮತ್ತೊಂದು ಸರ್ಕಾರಿ ಕಟ್ಟಡ ನಿರ್ಮಾಣಕ್ಕೆ ತಹಸೀಲ್ದಾರರು ಅಸಹಕಾರ ನೀಡುತ್ತಿರುವುದು ಖಂಡನಾರ್ಹ. ಈ ಬಗ್ಗೆ ಕ್ಷೇತ್ರದ ಶಾಸಕರು ತುರ್ತು ಗಮನ ಹರಿಸಬೇಕು. ಇಲ್ಲದಿದ್ದರೆ ರೈತರ ಆಸ್ತಿ ಪತ್ರಗಳ ಸಂರಕ್ಷಣೆಗೆ ಒತ್ತಾಯಿಸಿ ರಾಜ್ಯ ರೈತಸಂಘ ಹೋರಾಟಕ್ಕಿಳಿಯಲಿದೆ ಎಂದು ಕಾರಿಗನಹಳ್ಳಿ ಪುಟ್ಟೇಗೌಡ ಎಚ್ಚರಿಸಿದರು.

### ರೈತಸಂಘ ಒತ್ತಾಯ

ಶಿಥಿಲವಾದ ಹಳೆಯ ಕಟ್ಟಡದಲ್ಲಿರುವ ಉಪ ನೊಂದಣಾಧಿಕಾರಿಗಳ ಎಲ್ಲಾ ಆಸ್ತಿ ದಾಖಲಾತಿಗಳಿಗೆ ಕ್ರಮ ವಹಿಸುವಂತೆ ತಾಲೂಕು ರೈತಸಂಘ ಒತ್ತಾಯಿಸಿದೆ. ಒಟ್ಟಣದ ಉಪ ನೊಂದಣಾಧಿಕಾರಿಗಳ ಕಛೇರಿಗೆ ಆಗಮಿಸಿದ ತಾಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ನೂತನ ಕಟ್ಟಡ ನಿರ್ಮಾಣವಾಗುವವರೆಗೆ ತಾಲೂಕು ಆಡಳಿತ ಸೌಧದ ಕಛೇರಿಯ ಒಳಗೆ ಯಾವುದಾರೊಂದು ಸುಸಜ್ಜಿತ ಕೊಠಡಿ ಪಡೆದು ದಾಖಲೆಗಳ ಸಂರಕ್ಷಣೆಗೆ ಕ್ರಮ ವಹಿಸುವಂತೆ ಉಪ ನೊಂದಣಾಧಿಕಾರಿ ಡಿ.ಎಸ್.ಮಧುಸೂದನ್ ಅವರನ್ನು ಒತ್ತಾಯಿಸಿದರು.



# ತಲ್ಲೂರು ಕನಕಾ–ಅಣ್ಣಯ್ಯ ಶೆಟ್ಟಿ ಪ್ರಶಸ್ತಿ ಪ್ರದಾನ

ಸೊರಬ: ಯಕ್ಷಗಾನ ವಿದ್ವಾಂಸರನ್ನು ಗುರುತಿಸುವ ನಿಟ್ಟಿನಲ್ಲಿ ಕನಕ ಅಣ್ಣಯ್ಯ ಶೆಟ್ಟಿ ಪ್ರಶಸ್ತಿಯನ್ನು 2013 ರಲ್ಲಿ ಪ್ರಾರಂಭಿಸಲಾಗಿದ್ದು, ಈವರೆಗೆ 12 ಕ್ಕೂ ಅಧಿಕ ವಿದ್ವಾಂಸರನ್ನು ಗೌರವಿಸಲಾಗಿದೆ ಎಂದು ತಲ್ಲೂರು ಫ್ಯಾಮಿಲಿ ಟ್ರಸ್ಟ್ ಪ್ರವರ್ತಕ ಹಾಗೂ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಹೇಳಿದರು.

ಯಕ್ಷಗಾನ ಕಲಾರಂಗ ಐವೈಸಿ ಸಭಾಂಗಣದಲ್ಲಿ ತಲ್ಲೂರು ಕನಕಾ–ಅಣ್ಣಯ್ಯ ಶೆಟ್ಟಿ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಿಸ್ಪ್ರಹ ಕಾರ್ಯಕರ್ತರ ತಂಡ ಶ್ರದ್ಧೆಯಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಯಾವುದೇ ಸಂಸ್ಥೆ ಬೆಳೆಯಲು ಸಾಧ್ಯ. ಈ ನಿಟ್ಟಿನಲ್ಲಿ ಯಕ್ಷಗಾನ ಕಲಾರಂಗ ಮಾದರಿಯಾಗಿದ್ದು, ಸಾಧಕರನ್ನು ಗುರುತಿಸಿ ಗೌರವಿಸುವ ಕೆಲಸ ಮಾಡುತ್ತಿದೆ. ಗುರುರಾಜ ಮಾರ್ಪಳ್ಳಿ ಅವರು ಪ್ರಸಿದ್ಧಿಯ ಗೊಡವೆಯೇ ಇಲ್ಲದೆ ಸಾಧನೆ ಮಾಡಿರುವ ಅಪರೂಪದ ವ್ಯಕ್ತಿ ಎಂದು ಹೇಳಿದರು.

ಈ ಸಂದರ್ಭದಲ್ಲಿ 40 ಸಾವಿರ ನಗದು ಪುರಸ್ಕಾರಗಳನ್ನೊಳಗೊಂಡ ತಲ್ಲೂರು ಕನಕಾ&–ಅಣ್ಣಯ್ಯ ಶೆಟ್ಟಿ ಸ್ಮರಣಾರ್ಥ ಯಕ್ಷಗಾನ ಕಲಾರಂಗ ಪ್ರಶಸ್ತಿಯನ್ನು ಬಹುಮುಖಿ ಕಲಾ ಸಾಧಕ ಗುರುರಾಜ ಮಾರ್ಪಳ್ಳಿ ಅವರಿಗೆ ಪ್ರದಾನ ಮಾಡಲಾಯಿತು.

ಹಿರಿಯ ವಿದ್ವಾಂಸ ಪ್ರೊ. ಎಂ.ಎಲ್. ಸಾಮಗ ಅಭಿನಂದನ ಭಾಷಣ ಮಾಡಿ, ಗುರುರಾಜ ಮಾರ್ಪಳ್ಳಿಯವರು ಸದಾ ಪ್ರಯೋಗಶೀಲತೆಗೆ ಮತ್ತೊಂದು ಹೆಸರು. ವಿಲಕ್ಷಣ ವ್ಯಕ್ತಿತ್ವ ಹೊಂದಿರುವ ಅವರು ಎಲ್ಲಾ ಕಲಾ ಪ್ರಕಾರಗಳಲ್ಲಿ ತೊಡಗಿಸಿಕೊಂಡು ತನ್ನದೇ ಆದ ಛಾಪು ಮೂಡಿಸಿದ್ದಾರೆ ಎಂದರು.

ಸಭಾ ಕಾರ್ಯಕ್ರಮ ಬಳಿಕ ಗುರುರಾಜ ಮಾರ್ಪಳ್ಳಿಯವರ ನಿರೂಪಣೆಯಲ್ಲಿ ಯಕ್ಷಗಾನ ಭಾಗವತಿಕೆ–ಗಮಕಗಳ ಸಂಶೋಧನಾತ್ಮಕ ಅಧ್ಯಯನ ಪ್ರಸ್ತುತಿಪಡಿಸಲಾಯಿತು. ಭಾಗವತರಾಗಿ ಶಶಿಕಿರಣ್ ಮಣಿಪಾಲ್, ಮದ್ದಲೆ ವಾದಕರಾಗಿ ಕೂಡ್ಲಿ ದೇವದಾಸ್‌ರಾವ್, ಗಮಕ ವಿಶ್ಲೇಷಣಗಾರರಾಗಿ ಅರವಿಂದ ಹೆಬ್ಬಾರ್, ರವಿಕಿರಣ್ ಮಣಿಪಾಲ ಭಾಗವಹಿಸಿದ್ದರು.

# ಬೇಸಿಗೆ ಶಿಬಿರ

ಸಿಂದಗಿ: ಪಠ್ಯೇತರ ಚಟುವಟಿಕೆಯಲ್ಲಿ ಆಸಕ್ತಿ ಹೊಂದಿದ ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು ಎಂದು ಸಂಸ್ಥೆಯ ಅಧ್ಯಕ್ಷ ವಿಠ್ಠಲ ಕೋಳುರ ಹೇಳಿದರು.

ಪಟ್ಟಣದ ಹೊರವಲಯದ ಭೀಮಾ ಯುನಿವರ್ಸಲ್ ಸೆಂಟ್ರಲ್ ಶಾಲೆಯಲ್ಲಿ ಹಮ್ಮಿಕೊಂಡ ಬೇಸಿಗೆ ಶಿಬಿರ ಮುಕ್ತಾಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಕೇವಲ ಪಠ್ಯಕ್ಕೆ ಸೀಮಿತಗೊಳಿಸದೇ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡಿದ್ದು ಖುಷಿ ತಂದಿದೆ ಎಂದರು.

ಈ ವೇಳೆ ಮಕ್ಕಳ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಬಳಿಕ ಹಾಡು, ನೃತ್ಯ, ಸಂಗೀತ ಮತ್ತು ಯೋಗವನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಭೀಮಾಶಂಕರ ತಾರಾಪೂರ, ಪ್ರಶಾಂತ ಕಮತಗಿ, ಶಿವಶರಣ ಮಾವೂರ ಸೇರಿದಂತೆ ಪ್ರಾಚಾರ್ಯರು, ಸಿಬ್ಬಂದಿಗಳು ಇದ್ದರು.

# ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸೇವಾ ಟ್ರಸ್ಟ್ ಆರಂಭ

ಕನಕಪುರ: ನಗರದ ಮಹದೇಶ್ವರ ಬಡಾವಣೆಯಲ್ಲಿನ ಮಹದೇಶ್ವರ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಹಲವು ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲು ಮಹದೇಶ್ವರಸ್ವಾಮಿ ದೇವಸ್ಥಾನದ ಸೇವಾಟ್ರಸ್ಟ್ ಆರಂಭವಾಗಿದೆ ಎಂದು ಸೇವಾಟ್ರಸ್ಟ್‌ನ ನೂತನ ಅಧ್ಯಕ್ಷ ಮಲ್ಲೇಶ್ ತಿಳಿಸಿದ್ದಾರೆ.

ಶನಿವಾರ ಮಹದೇಶ್ವರ ಬಡಾವಣೆಯಲ್ಲಿನ ಕಬ್ಬಾಳಮ್ಮ ಕನ್ವೆನ್ಷನ್ ಹಾಲ್‌ನಲ್ಲಿ ಜರುಗಿದ ಸೇವಾಟ್ರಸ್ಟ್‌ನ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು ನಮ್ಮ ಬಡಾವಣೆಯಲ್ಲಿ ಈಗಾಗಲೇ ಮಹದೇಶ್ವರ ದೇವಾಲಯದಪೂಜಾ ಕೈಂಕರ್ಯಗಳು ಹಿಂದಿನಿಂದಲೂ ನಡೆದುಕೊಂಡು ಬರುತ್ತಿವೆ. ಅದಕ್ಕಾಗಿ ದೇವಾಲಯವನ್ನು ನೂತನವಾಗಿ ಜೀರ್ಣೋದ್ಧಾರ ಹಾಗು ಭಜನಾ ಮಂದಿರ, ಸಮುದಾಯ ಭವನಗಳನ್ನು ನಿರ್ಮಿಸುವ ಉದ್ದೇಶ ಟ್ರಸ್ಟ್‌ನ ಮುಂದಿದೆ.

ಹಿಂದಿನಿಂದಲೂ ನಡೆದುಕೊಂಡು ಬರುತ್ತಿರುವ ಅನ್ನದಾನ, ಉತ್ಸವಗಳ ಜೊತೆಗೆ ನಿರಂತರವಾಗಿ ಧಾರ್ಮಿಕ ಕೈಂಕರ್ಯಗಳು ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ಭಕ್ತರನ್ನು ಆಕರ್ಷಿಸುವಂತೆ ನಿರಂತರವಾಗಿ ಕಾರ್ಯಕ್ರಮಗಳು ನಡೆಯಬೇಕು. ಈ ಉದ್ದೇಶದಿಂದಲೇ ಇಂದು ಮಹದೇಶ್ವರಸ್ವಾಮಿ ದೇವಾಲಯ ಸೇವಾಟ್ರಸ್ಟ್‌ನ 15 ಮಂದಿ ಪದಾಧಿಕಾರಿಗಳ ಆಯ್ಕೆಯೂ ಸಹ ನಡೆಯಲಿದೆ. ನೂತನ ಪದಾಧಿಕಾರಿಗಳು ಸಹಕಾರದಿಂದ ಅಭಿವೃದ್ಧಿ ಹಾಗು ಪೂಜಾ ಭಕ್ತರ ದೇಗುಲದ ಸೇವಾ ಕಾರ್ಯಕ್ರಮಗಳಿಗೆ ತನುಮನಧನವನ್ನು ಅರ್ಪಿಸಿ ಟ್ರಸ್ಟ್‌ನ ಕಾರ್ಯಕ್ರಮಗಳಲ್ಲಿ ಸಂಪೂರ್ಣ ತೊಡಗಿಸಿಕೊಳ್ಳಬೇಕು

## ಸ್ಥಳೀಯ

ಇ-ಪೇಪರ್: www.munjaneevartheepaper.com

# ಅನರ್ಥ ಚಿತ್ರದ ಹಾಡು, ಟೀಸರ್ ಬಿಡುಗಡೆ

ಬೆಂಗಳೂರು: ಬಲಹೀನತೆಯಿಂದ ಕ್ರೂರತನ ಹುಟ್ಟುತ್ತದೆ ಎಂಬ ವಾಕ್ಯವನ್ನು ರೋಮ್ ಫಿಲಾಸಫರ್ ಸೆನಕ ಅಂದೇ ಹೇಳಿದ್ದರು. ಇಂತಹುದೆ ಅಂಶಗಳನ್ನು ಹೆಕ್ಕಿಕೊಂಡು 'ಅನರ್ಥ' ಎನ್ನುವ ಸಿನಿಮಾದ ಅಡಿಬರಹಕ್ಕೆ ಬಳಸಲಾಗಿ, ಸೆನ್ಸಾರ್‌ನಿಂದ ಪ್ರಶಂಸೆ ಪಡೆದುಕೊಂಡಿದೆ.

ಪ್ರಚಾರದ ಮೊದಲ ಹಂತವಾಗಿ ಟೀಸರ್ ಹಾಗೂ ಸಾಂಗ್, ರೇಣುಕಾಂಬ ಸ್ಟುಡಿಯೋದಲ್ಲಿ ಕಿಕ್ಕಿರಿದ ಜನರು ಎದುರು ಲೋಕಾರ್ಪಣೆಗೊಂಡಿತು. ನಿರ್ದೇಶಕರು ಮಾಧ್ಯಮಮಿತ್ರರನ್ನು ಮುಖ್ಯ ಅತಿಥಿ ಎಂದು ಪರಿಗಣಿಸಿದ್ದರಿಂದ, ಹಿರಿಯ ಪತ್ರಕರ್ತರಿಂದ ಟೀಸರ್ ಹಾಗೂ ಸಹ ನಿರ್ಮಾಪಕಿ ಜೆ.ಅಂಜಲಿ ಪುತ್ರಿಯರಾದ ಕುಮಾರಿ ಜಯಕೀರ್ತಿ ಮತ್ತು ಜಯಕನ್ನಿಕ ಜಂಟಿಯಾಗಿ ಹಾಡನ್ನು ಬಿಡುಗಡೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಯಶಸ್ವಿ ಧಾರವಾಹಿಗಳಾದ 'ಅರ್ಧ ಸತ್ಯ' ಧಾರವಾಹಿಯನ್ನು ನಿರ್ದೇಶಿಸಿ ಅತ್ಯುತ್ತಮ ಆರ್ಯಭಟ ಪ್ರಶಸ್ತಿಯನ್ನು ಪಡೆದು, ನಂತರ 'ಗುಪ್ತಗಾಮಿನಿ' 'ಪ್ರೀತಿ ಇಲ್ಲದ ಮೇಲೆ' ಯಶಸ್ವಿ ಧಾರವಾಹಿಗಳಾದ ಮೊದಲ ಕಂತುಗಳ ನಿರ್ದೇಶನ ಮಾಡಿ, ಆ ನಂತರ ಸುಮಾರು 3500 ಕಂತುಗಳ ಅನೇಕ ಧಾರವಾಹಿಗಳಾದ 'ಶಿವ' 'ಕದನ' 'ಲಕುಮಿ' 'ಚುಕ್ಕಿ' 'ಗೋಕುಲದಲ್ಲಿ ಸೀತೆ' ನಿರ್ದೇಶಿಸಿರುತ್ತಾರೆ. 'ಮೆಲ್ಲುಸಿರೆ ಸವಿಗಾನ' ಚಿತ್ರವನ್ನು ನಿರ್ದೇಶನ ಮಾಡಿರುವ ರಮೇಶ್ ಕೃಷ್ಣ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ.



ಈ ಸಂದರ್ಭದಲ್ಲಿ ಮಾತನಾಡಿದ ಅವರು ಅವಕಾಶ್–ಆಕೃತಿ ಎರಡು ಪಾತ್ರಗಳ ಸುತ್ತ ಚಿತ್ರವು ಸಾಗುತ್ತದೆ. ಇಬ್ಬರು ಒಂದು ಮಟ್ಟಕ್ಕೆ ಪ್ರೀತಿಸಿರುತ್ತಾರೆ. ನಾವುಗಳು ಬ್ರೇಕ್‌ಅಪ್ ಎನ್ನುವ ಪದವನ್ನು ನಮ್ಮ ಮನಸ್ಸಿನಿಂದ ಅಳಿಸಿ ಹಾಕಿದ ನಂತರ, ಅಮವ್ಯಾಸೆಯ ದಿನ ಯಮಗಂಡ ಕಾಲದಲ್ಲಿ ಮದುವೆಯಾಗಲು ನಿರ್ಧರಿಸಿ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಒಂದು ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿಗೆ ಹೋದಾಗ ಏನಾಗುತ್ತದೆ.

ನೋಡುಗರಿಗೆ ಊಹಿಸಲಾಗದ ತಿರುವುಗಳಿವೆ. ಕ್ಲೈಮಾಕ್ಸ್‌ದಲ್ಲಿ ಹೀಗೂ ಆಗಬಹುದು ಎನ್ನುವಲ್ಲಿಗೆ ಶುಭಂ ಬರುತ್ತದೆ. ನಮ್ಮ ಚಿತ್ರವು ಎಲ್ಲಾ ಕಮರ್ಷಿಯಲ್ ಸಿನಿಮಾಗಳ ಅಂಶಗಳನ್ನು ಹೊಂದಿದ್ದರೂ, ಒಂದು ಅಂಶವು ಖಂಡಿತ ಭಿನ್ನವಾಗಿದೆ. ಅದನ್ನು ತಿಳಿಯಲು ನೀವುಗಳು ಚಿತ್ರಮಂದಿರಕ್ಕೆ ಬನ್ನಿರೆಂದು ಕೋರಿದರು.

ನಾಯಕನಾಗಬೇಕೆಂದು ಆಸೆ ಪಟ್ಟಿದ್ದೆ. ಉದ್ಯಮದಲ್ಲಿ ಯಶಸ್ಸು ಕಂಡು, ಈಗ ತೇಜಸ್ ಸಿನಿ ಕ್ರಿಯೇಶನ್ಸ್ ಮೂಲಕ ನಿರ್ಮಾಪಕನಾಗಿದ್ದೇನೆ ಎನ್ನುತ್ತಾರೆ ಶ್ರೀಧರ್. ಎನ್.ಸಿ.ಹೊಸಮನೆ.

ನಟ ಮಂಡ್ಯರಮೇಶ್ ಬಳಿ ತರಭೇತಿ ಪಡೆದುಕೊಂಡಿರುವ ವಿಶಾಲ್ ಮಣ್ಣೂರು ನಾಯಕ. ಮೆಡಿಕಲ್ ವ್ಯಾಸಂಗ ಮಾಡುತ್ತಿರುವ ಮಂಡ್ಯದ ವಿಹಾನಿ, ಕಿರುಚಿತ್ರಗಳಲ್ಲಿ ನಟಿಸಿ, ಈಗ ನಾಯಕಿಯಾಗಿ ಬಡ್ತಿಗೊಂಡಿದ್ದಾರೆ. ಉಳಿದಂತೆ ಸಿ.ವಿಜಯ್‌ಕುಮಾರ್, ರಕ್ಷಿತ್, ಗಣೇಶ್, ಪ್ರಸನ್ನ ಬಾಗೀನ, ಅರ್ಪಿತ ಮುಂತಾದವರು ನಟಿಸಿದ್ದಾರೆ. ಸಾಹಿತ್ಯ–ಸಂಗೀತ ಡಾ.ವಿ.ನಾಗೇಂದ್ರಪ್ರಸಾದ್, ಛಾಯಾಗ್ರಹಣ ಕುಮಾರ್‌ಗೌಡನಾಗವಾರ, ಸಂಕಲನ ನಿಷಿತ್‌ಪೂಜಾರಿ–ವಿನಯ್, ಹಿನ್ನಲೆ ಶಬ್ದ ನಿತಿನ್, ಸಾಹಸ ಕುಂಗು ಫು ಚಂದ್ರು ಅವರದಾಗಿದೆ. ವಿತರಕ ಎಂ.ರಮೇಶ್ ಒಡೆತನದ ಅಕ್ಷರ ಫಿಲಿಂಸ್ ಮುಖಾಂತರ ಚಿತ್ರವು ಜೂನ್ ತಿಂಗಳಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ.

# ತೀವ್ರ ಮಳೆ ಕೊರತೆ ಎದುರಿಸಿದ್ದ ತಿ.ನರಸೀಪುರ ತಾಲ್ಲೂಕಿನಲ್ಲಿ ಇದೀಗ ಭರ್ಜರಿ ಮಳೆ

ತಿ.ನರಸೀಪುರ.ಮುಂಗಾರು ಹಂಗಾಮು ಈಗತಾನೇ ಪ್ರಾರಂಭವಾಗಿ,ಭರ್ಜರಿಯಾಗಿ ಮಳೆಯ ಅಬ್ಬರ ಶುರುವಾಗಿದೆ,ಇಂತಹ ಸಂದರ್ಭದಲ್ಲಿ ರೈತರು ಸೇರಿದಂತೆ ಜನ ಸಾಮಾನ್ಯರು ಎಚ್ಚರ ವಹಿಸುವಂತೆ ತಾಲ್ಲೂಕು ದಂಡಾಧಿಕಾರಿ ಸುರೇಶಾಚಾರ್ ತಿಳಿಸಿದ್ದಾರೆ .



ಪಟ್ಟಣದ ತಾಲ್ಲೂಕು ಆಡಳಿತ ಸೌಧದ ತಮ್ಮ ಕಛೇರಿಯಲ್ಲಿ ಪತ್ರಿಕಾ ಹೇಳಿಕೆ ನೀಡಿ ಮಾತನಾಡಿದ ಸುರೇಶಾಚಾರ್ ತೀವ್ರ ಮಳೆ ಕೊರತೆ ಎದುರಿಸಿದ್ದ ತಿ.ನರಸೀಪುರ ತಾಲ್ಲೂಕಿನಲ್ಲಿ ಇದೀಗ ಭರ್ಜರಿ ಮಳೆ ಸುರಿಯುತ್ತಿದ್ದು ,ಜನರು ನಿಟ್ಟುಸಿರು ಬಿಟ್ಟಿದ್ದಾರೆ & ರೈತರು ಖುಷಿಯಾಗಿದ್ದಾರೆ ಇದರ ಜೊತೆಗೆ

ಮಳೆಯಿಂದ ಅವಘಡಗಳು ಕೂಡ ಸಂಭವಿಸುವುದರಿಂದ ರೈತ ಬಾಂದವರು ಸೇರಿದಂತೆ ಜನ ಸಾಮಾನ್ಯರು ಮಳೆ,ಗುಡುಗು,ಮಿಂಚು ಶುರುವಾದಾಗ ಎಚ್ಚರವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಮರಗಳ ಕೆಳಗೆ ನಿಲ್ಲಬೇಡಿ:–ಗುಡುಗು,ಮಿಂಚು ಸಹಿತ

ಮಳೆ ಜೋರಾಗಿ ಬರುವಾಗ ಮರಗಳೇ ತುಂಬ ಅಪಾಯ ತಂದೊಡ್ಡುತ್ತವೆ, ಈ ರೀತಿ ಜೋರಾಗಿ ಮಳೆ ಬಂದು ಗಾಳಿ ಬೀಸುವಾಗ ಯಾವ ಸಮಯದಲ್ಲಿ ಬೇಕಾದರೂ ಮರ ಬೀಳಬಹುದು ಹಾಗೂ ಸಿಡಿಲು ಬಡೆಯುವ ಸಂಭವ ಇರುತ್ತದೆ ಹಾಗಾಗಿ ಮಳೆ ಬರುವಾಗ ಯಾವುದೇ ಕಾರಣಕ್ಕೂ ಮರಗಳ ಕೆಳಗಡೆ, ನಿಲ್ಲುವುದಕ್ಕೆ ಹೋಗಬೇಡಿ. ಸಾಧ್ಯವಾದಷ್ಟೂ ಮರಗಳಿಂದ ದೂರವೇ ಇರಿ ಹತ್ತಿರ ಇರುವ ಬಸ್ ನಿಲ್ದಾಣದಲ್ಲಿ ಅಥವಾ ಕಟ್ಟಡಗಳಲ್ಲಿ ಆಶ್ರಯ ಪಡೆದರೆ ಉತ್ತಮ ಎಂದರು.

ಸಿಡಿಲ ಬಗ್ಗೆ ಎಚ್ಚರ:–

ಮಳೆ ಬರುವಾಗ ನೀವು ದ್ವಿಚಕ್ರ ವಾಹನ ಓಡಿಸುತ್ತಿದ್ದರೆ, ತಕ್ಷಣ ಗಾಡಿ ನಿಲ್ಲಿಸಿ. ಸೂಕ್ತ ಪ್ರದೇಶದಲ್ಲಿ ಆಶ್ರಯ ಪಡೆಯಿರಿ. ಅಲ್ಲದೆ ಯಾವುದೇ ಕಾರಣಕ್ಕೂ ಖಾಲಿ ಜಾಗ ಹಾಗೂ ಎತ್ತರ ಇರುವ ಪ್ರದೇಶದಲ್ಲಿ ನಿಲ್ಲಬೇಡಿ. ಇಂತಹ ಜಾಗದಲ್ಲಿ ಸಿಡಿಲು ಬಡಿಯುವ ಸಾಧ್ಯತೆ ಹೆಚ್ಚು ಅಂತಾ ಹೇಳಲಾಗುತ್ತದೆ. ಹೀಗಾಗಿ ಸಾಧ್ಯವಾದಷ್ಟು ಕಟ್ಟಡಗಳು ಇರುವ ಕಡೆ ನಿಂತುಕೊಳ್ಳಿ ಆಗ ನೀವು ಸುರಕ್ಷಿತವಾಗಿ ಇರಬಹುದು.

ರೈತರು ಮಳೆ ಬರುವಾಗ ಜಾಗೃತರಾಗಿ:– ರೈತರು ಜಮೀನಿನಲ್ಲಿ

ಇದ್ದಾಗ ಮಳೆ ಸುರುವಾಗುವ ಲಕ್ಷಣ ಗೋಚರಿಸಿದ ತಕ್ಷಣ ಸುರಕ್ಷಿತ ಸ್ಥಳಕ್ಕೆ ತಮ್ಮ ಜಾನುವಾರುಗಳೊಂದಿಗೆ ಸೇರಿಕೊಳ್ಳಿ ಒಂದು ವೇಳೆ ಮಳೆ ಪ್ರಾರಂಭವಾದರೆ ತಾವು ಎತ್ತರ ಪ್ರದೇಶಗಳಲ್ಲಿ ಇರದೆ ತಗ್ಗು ಪ್ರದೇಶಗಳತ್ತ ಧಾವಿಸಬೇಕು ಯಾವುದೇ ಕಾರಣಕ್ಕೂ ಬಯಲು ಪ್ರದೇಶ ಹಾಗೂ ಮರಗಳ ಕೆಳಗಡೆ ನಿಲ್ಲುವುದಕ್ಕೆ ಹೋಗಬೇಡಿ ಎಂದು ಮನವಿ ಮಾಡಿದರು.

ಕಾಂಪೌಂಡ್ ಪಕ್ಕ ನಿಲ್ಲ ಬೇಡಿ:–

ಮಳೆ ಬರುವ ಸಮಯದಲ್ಲಿ ಮರಗಳಿಗಿಂತ ಹೆಚ್ಚು ಅಪಾಯ ಕಾಂಪೌಂಡ್, ಕಾಂಪೌಂಡ್ ನಿರ್ಮಾಣ ಮಾಡುವಾಗ ಅಷ್ಟು ಮುಂಜಾಗ್ರತೆ ವಹಿಸಿರುವುದಿಲ್ಲ. ಹಾಗೇ ಬಹುತೇಕ ಕಾಂಪೌಂಡ್‌ಗಳು ಹಳೆಯದಾಗಿ ರುತ್ತವೆ. ಹೀಗಾಗಿ ನೀರು ಬೀಳುವಾಗಲೇ, ಕಾಂಪೌಂಡ್ ಗೋಡೆ ಕುಸಿದು ಬೀಳುವ ಆತಂಕ ಇದ್ದೇ ಇರುತ್ತದೆ. ಹಾಗೂ ತೀರ ಶಿಥಿಲವಾಗಿ ರುವ ಮನೆಗಳಲ್ಲೂ ಸಹ ವಾಸ ಮಾಡಬೇಡಿ ಎಂದರು.

ವಿದ್ಯುತ್ ಕಂಬ,ಟವರ್ ಹತ್ತಿರ ಹೋಗಬೇಡಿ:– ಮಳೆ ಸುರಿಯುವಾಗ

ವಿದ್ಯುತ್ ಕಂಬ ಹಾಗೂ ಮೊಬೈಲ್ ಟವರ್ ಹತ್ತಿರ ಹೋಗಬೇಡಿ ಹಾಗೂ ಯಾವುದೇ ರೀತಿ ಮೆಟಲ್ ಅಂದ್ರೆ ಕಬ್ಬಿಣ ಮತ್ತಿತರ ಲೋಹಗಳಿಂದ ತಯಾರಿಸಿದ ವಸ್ತುಗಳಿಂದ ದೂರ ಇರಿ. ಯಾಕಂದ್ರೆ ಇದು ತುಂಬಾನೆ ಅಪಾಯ. ಯಾವುದೇ ಕ್ಷಣದಲ್ಲಿ ಈ ವಸ್ತುಗಳಿಂದ ವಿದ್ಯುತ್ ಹರಿಯಬಹುದು, ಹಾಗೇ ನಿಮಗೆ ಆ ಕ್ಷಣ ಪ್ರಾಣಾಪಾಯ ಎದುರಾಗುವ ಸಾಧ್ಯತೆ ಇರುತ್ತದೆ. ಇದರ ಜೊತೆಯಲ್ಲಿ ತಂತಿ ಬೇಲಿ, ಕಬ್ಬಿಣ ಪೈಪ್ ಮುಟ್ಟುವ ಸಾಹಸ ಮಾಡಬೇಡಿ ಹಾಗೂ ಮೊಬೈಲ್ ಬಳಕೆ ಕೂಡ ಮಾಡಬೇಡಿ ಎಂದರು.

# ಬಂಡೀಪುರದಲ್ಲಿ ಆನೆ ಗಣತಿ ಕಾರ್ಯ ಆರಂಭ

ಗುಂಡ್ಲುಪೇಟೆ: ಇಂದಿನಿಂದ ಬಂಡೀಪುರ ರಾಷ್ಟ್ರೀಯ ಉದ್ಯಾನದಲ್ಲಿ ಮೂರು ದಿನಗಳ ಆನೆಗಳ ಗಣತಿ ಕಾರ್ಯ ಆರಂಭ ಇತ್ತೀಚೆಗೆ ಮಳೆಬಿದ್ದು ಹಸಿರಿನಿಂದ ಕೂಡಿರುವ ಅರಣ್ಯದಲ್ಲಿ ಆನೆಗಳ ಗಣತಿ ಕಾರ್ಯ ಕಷ್ಟಕರವಾಗಿದ್ದರೂ ಸಹ ಸಿಬ್ಬಂದಿ ನಿರ್ದಿಷ್ಟಗೆಣಟಿಜಜಜಿಟಿಜಜಳಿಸಿದ ಬ್ಲಾಕ್‌ನಲ್ಲಿ ಸಾಗಿದರು ಮತ್ತು ಅಲ್ಲಿ ಆನೆಗಳ ಲದ್ದಿ ಹಾಗೂ ಗುಂಪು ಗುಂಪಾಗಿ ಕಾಣುವ ಕಾಡಾನೆಗಳ ಫೋಟೋ ತೆಗೆದು ಅವುಗಳನ್ನು ಎಣಿಕೆ ಮಾಡುವುದರೊಂದಿಗೆ ಆನೆಗಣತಿಯನ್ನು ದಾಖಲಿಸಿದ

ದಕ್ಷಿಣದ ರಾಜ್ಯಗಳಲ್ಲಿ ಆನೆ ಮಾನವ ಸಂಘರ್ಷದ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ಪರಿಹಾರೋಪಾಯಗಳನ್ನು ರೂಪಿಸಲು ಕರ್ನಾಟಕ, ಕೇರಳ, ತಮಿಳುನಾಡು ಹಾಗು ಆಂದ್ರಪ್ರದೇಶದ ಗಡಿ ಅರಣ್ಯ ಪ್ರದೇಶಗಳಲ್ಲಿ ಏಕಕಾಲದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಆನೆ ಗಣತಿ ನಡೆಯಲಿದೆ.

ನೆರೆಯ ರಾಜ್ಯಗಳಾದ ಕೇರಳ ಹಾಗು ತಮಿಳುನಾಡು ರಾಜ್ಯಗಳಲ್ಲಿ ಸಂಯೋಜಿತ ಆನೆಗಳ ಸಂಖ್ಯೆ ಪತ್ತೆಗೆ ಗಣತಿ ನಡೆಸಲಾಗುತ್ತಿದೆ. ಆನೆಗಣತಿಗೆ ವಿವಿಧ ವಿಧಾನಗಳನ್ನು ಅನುಸರಿಲಾಗುತ್ತದೆ. ಆನೆಯ ಲದ್ದಿಯ ಮಾದರಿ ಸಂಗ್ರಹ ಮತ್ತು ನೇರವಾಗಿ ಏಣಿಕೆ ಮಾಡುವುದು, ಅರಣ್ಯ ಪ್ರದೇಶವನ್ನು ಬ್ಲಾಕ್ ಗಳನ್ನಾಗಿ ವಿಂಗಡಿಸಿ ಒಂದೊಂದು ಬ್ಲಾಕ್ ಗು ಸಿಬ್ಬಂದಿಯನ್ನು ನಿಯೋಜಿಸಿ ಆ ಪ್ರದೇಶದಲ್ಲಿ ಕಾಣುವ ಆನೆಗಳ ಸಂಖ್ಯೆಯನ್ನು ದಾಖಲಿಸುವುದು ಮತ್ತು ಗುಂಪಿನಲ್ಲಿ ಕಾಣುವ ಆನೆಗಳ ಛಾಯಾಚಿತ್ರ ತೆಗೆದು ಎಣಿಸುವುದು ಹಾಗು ಸೀಳುದಾರಿಗಳಲ್ಲಿ ಲದ್ದಿಎಣಿಕೆ ಮಾಡುವ ಮೂಲಕ ಆನೆಗಣತಿ ಮಾಡಲಾಗುತ್ತದೆ. ಆನೆಗಳ ಅಂಕಿಅಂಶಗಳ ಪತ್ತೆಯ ಜೊತೆಗೆ ಆನೆ ಕಾರಿಡಾರ್ ಗಳನ್ನು ಪುನರ್ ಸ್ಥಾಪಿಸಬೇಕು

ವರದಿ: ಮಹದೇವಪ್ರಸಾದ್ ಹಂಗಳ



# ಸ್ವಕಾರ ತಾಲೂಕಾ ಎಲ್ಲ ಸರಕಾರಿ ಅಧಿಕಾರಿಗಳ ಪ್ರಗತಿಪರಿಶಿಲನಾ ಸಭೆ

ಮುಂಜಾನೆ ವಾರ್ತೆ. ಸುದ್ದಿ. ಮುದ್ದೇಬಿಹಾಳ ಪಟ್ಟಣದ ಹಡ್ಕೋ ಬಡಾವಣೆಯಲ್ಲಿರುವ ಮಿನಿ ವಿಧಾನ ಸೌಧ ಸಭಾಭವನದಲ್ಲಿ ನಡೆದ ಸಾರ್ವಜನಿಕರ ಅಹವಾಲು ಸ್ವಕಾರ ತಾಲೂಕಾ ಎಲ್ಲ ಸರಕಾರಿ ಅಧಿಕಾರಿಗಳ ಪ್ರಗತಿಪರಿಶಿಲನಾ ಸಭೆಯಲ್ಲಿ ಲೋಕಾಯುಕ್ತ ಎಸ್ ಪಿ ಟಿ ಮಲ್ಲೇಶ ಅವರು ಮಂಗಳವಾರ ಬಾಗವಹಿಸಿ ಅವರು ಮಾತನಾಡಿದರು.

ಮುದ್ದೇಬಿಹಾಳ: ತಾಲೂಕಿನಲ್ಲಿ ಎಲ್ಲ ಗ್ರಾಮ ಪಂಚಾಯಿತಿ ಪಿಡಿಓಗಳು ಸಾರ್ವಜನಿಕ ಸಂಪರ್ಕಕ್ಕೆ ಸಿಗುತ್ತಿಲ್ಲ ಜತೆಗೆ ಆಯಾ ಗ್ರಾಮಗಳ ಅಭಿವೃದ್ಧಿ ಪೂರಕ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನಡೆಸಿಕೊಂಡು ಬರುತ್ತಿಲ್ಲ ಅದಲ್ಲದೇ ಯಾವೂದೇ ಕೆಲಸಕ್ಕೆ ಹಣ ಕೇಳುತ್ತಿರುವ ಎಂಬ ದೂರುಗಳು ಕೇಳಿಬರುತ್ತಿವೆ ಕಾರಣ ಅಂತಹ ಘಟನೆಗಳನ್ನು ನಡೆಯದಂತೆ ನೋಡಿಕೊಳ್ಳಬೇಕು ಇಲ್ಲವೆಂದರೆ ಅಂತಹ ಅಧಿಕಾರಿಗಳನ್ನು ಕಾನೂನುಕ್ರಮಕ್ಕೆ ಬೇಕಾಗುತ್ತದೆ ಎಂದು ಲೋಕಾಯುಕ್ತ ಎಸ್.ಪಿ. ಟಿ. ಮಲ್ಲೇಶ ತಾಕಿತು ಮಾಡಿದರು.

ಪಟ್ಟಣದ ಹಡ್ಕೋ ಬಡಾವಣೆಯಲ್ಲಿರುವ ಮಿನಿ ವಿಧಾನ ಸೌಧ ಸಭಾಭವನದಲ್ಲಿ ನಡೆದ ಸಾರ್ವಜನಿಕರ ಅಹವಾಲು ಸ್ವಕಾರ ತಾಲೂಕಾ ಎಲ್ಲ ಸರಕಾರಿ ಅಧಿಕಾರಿಗಳ ಪ್ರಗತಿಪರಿಶಿಲನಾ ಸಭೆಯಲ್ಲಿ ಮಂಗಳವಾರ ಬಾಗವಹಿಸಿ ಅವರು ಮಾತನಾಡಿದರು.

ತಾಲೂಕಿನ ಎಲ್ಲ ಸರಕಾರಿ ಕಚೇರಿಗಳನ್ನು ನೌಕರರ ಹಾಜರಾತಿ ಸೇರಿದಂತೆ ಇತರೇ ದಾಖಲೆಗಳನ್ನು ಸರಿಯಾಗಿ ಇರುವಂತೆ ನೋಡಿಕೊಳ್ಳಬೇಕು ಸಾರ್ವಜನಿಕರು ತಮ್ಮ



ಇಲಾಖೆಗೆ ಯಾವೂದೆ ಕೆಲಸಕ್ಕೆಂದು ಬಂದರೆ ತಕ್ಷಣವೇ ಅವರನ್ನು ಗೌರವದಿಂದ ಕಾಣುವ ಮೂಲಕ ತ್ವರಿತಗತಿಯಲ್ಲಿ ಅವರ ಕೆಲಸ ಮುಗಿಸಿ ಕಳಿಸಬೇಕು. ಲಂಚಮುಕ್ತ ಆಡಳಿತಕ್ಕೆ ಹೆಚ್ಚು ಆದ್ಯತೆ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಅಧಿಕಾರಿಗಳಿಗೆ ಸಲಹೇ ನೀಡಬೇಕು.

ಎಲ್ಲ ವಸತಿ ನಿಲಯಗಳ ಸ್ವಚ್ಚತೆ ಹಾಗೂ ಮಕ್ಕಳ ಸಂಖ್ಯೆ ಸೇರಿದಂತೆ ಗುಣಮಟ್ಟ ಆಹಾರ ಮಕ್ಕಳ ಹಾಜರಾತಿ ಸೇರಿದಂತೆ ಅನೇಕ ವಿಷಯಗಳ ಲೊಕಪದೋಷಗಳ ಬಗ್ಗೆ ಮಾಹಿತಿ ಪಡೆದುಕೋಂಡರು. ಮಡಿಕೇಶ್ವರ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿದಾಗಸಿಬ್ಬಂದಿಗಳು ಅಲ್ಲಿ ಸರಿಯಾದ ಸಮಯಕ್ಕೆ ಹಾಜರಿರುವದಿಲ್ಲ ಜೊತೆಗೆ ಎಲ್ಲೊ ಆಸ್ಪತ್ರೆಗಳಲ್ಲಿ ಸ್ವಚ್ಚತೆ ಇರುವುದಿಲ್ಲ ರೋಗಿಗಳಿಗೆ ಪರದಾಡುವಂತೆ ಸಿಬ್ಬಂದಿಗಳು ಮಾಡುತ್ತಿದ್ದಾರೆ ಯಾಕೇ ಹಾಗಾದಂತೆ ನೋಡಿಕೊಳ್ಳಬೇಕು ಎಂದು ತಾಲೂಕಾ ಆರೋಗ್ಯಾಧಿಕಾರಿ ಡಾ, ಸತೀಶ ತಿವಾರಿ ಅವರಿಗೆ ಸೂಚಿಸಿದರು.

ಸಧ್ಯ ಎಲ್ಲೆಡೆ ಮುಂಗಾರು ಬಿತ್ತನೆಗಾಗಿ ರೈತರು ಕಾಯುತ್ತಿದ್ದಾರೆ ಬೀಜ ಮತ್ತು ಗೊಬ್ಬರ ವಿತರಣೆಯಲ್ಲಿ ತೊಂದರೆಯಾಗದಂತೆ ಸರಕಾರದ ಯೋಜನೆಗಳನ್ನು ಸಮರ್ಪಕವಾಗಿ ತಲುಪುವಂತೆ ನೋಡಿಕೊಳ್ಳುವುದರೊಂದಿಗೆ ರೈತರಿಗೆ ಅನುಕೂಲ ಮಾಡಿಕೊಡಬೇಕು. ಕೃಷಿಹೊಂಡ ಸಹಾಯ ಧನ ಬಗ್ಗೆ ಮಾಹಿತಿ ಪಡೆದುಕೊಂಡು ಮುದ್ದೇಬಿಹಾಳ ತಾಲೂಕಿಗೆ ಕೃಷಿಹೊಂಡ ಮಾಡಿರುವ ಬಗ್ಗೆ, ಮಾಹಿತಿ ಪಡೆದುಕೊಂಡು 08 ಕೃಷಿ ಹೊಂಡ ಮಾಡಿರುವುದಾಗಿ ತೋಟಗಾರಿಕ ಅಧಿಕಾರಿ ತಿಳಿಸಿದರು. ಕಳೆದ ವರ್ಷ ಕೃಷಿ ಹೊಂಡ ಲ್ಯಾಪ್ಸ್ ಆದ ಬಗ್ಗೆ ಕಛೇರಿಗೆ ಮಾಹಿತಿ ಸಲ್ಲಿಸುವಂತೆ ಕೃಷಿ ಆ ರವರಿಗೆ ತಿಳಿಸಿದರು. ಕೃಷಿ ಹೊಂಡಗಳ ಬೇಡಿಕೆ ಬಗ್ಗೆ ಹಾಗೂ ಪಾಲಿ ಹೌಸ ಸೇರಿದಂತೆ ಎಲ್ಲ ಸಂಪೂರ್ಣ ಮಾಹಿತಿ ನೀಡಬೇಕು ಎಂದು ತಾಲೂಕಾ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಹಾಗೂ ತಾಲೂಕಾ ಕೃಷಿ ಅಧಿಕಾರಿ ಸುರೇಶ ಬಾವಿಕಟ್ಟಿ ಅವರಿಗೆ ಸೂಚಿಸಿದರು.

ಪಟ್ಟಣದಲ್ಲಿ ಸ್ವಚ್ಚತೆಯಿಲ್ಲದೇ ಎಲ್ಲೆಂದರಲ್ಲಿ ಪ್ಲಾಷ್ಟಿಕ ಘನತ್ಯಾಜ್ಯವಸ್ತುಗಳನ್ನು ಎಸೆದಿರುವುದು ಕಂಡುಬರುತ್ತಿದೆ ಯಾಕೇ ಸ್ವಚ್ಚತೆ ಬಗ್ಗೆ ಯಾಕೇ ಕಾಳಜಿ ವಹಿಸುತ್ತಿಲ್ಲ ಅಧಿಕಾರಿಗಳು ಏನು ಮಾಡುತ್ತಿರುವಿರಿ ಎಂದು ಪುರಸಭೆ ಅಧಿಕಾರಿಗಳಿಗೆ ತರಾಟಗೆ ತಗೆದುಕೊಂಡರು.

ಜೊತಗೆ ತಾಲೂಕಿನಲ್ಲಿ ಎಲ್ಲ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಯಾಗದಂತೆ ನೋಡಿಕೊಳ್ಳುವುದರೊಂದಿಗೆ ಸ್ವಚ್ಚ ಆಡಳಿತ ನಡೆಸಬೇಕು ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜ ಇಲಾಖೆ ಎಇಇ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನ ರೇಷ್ಮೇ ಇಲಾಖೆ, ಪಶುಸಂಗೋಪನಾ ಇಲಾಖೆ, ದಂಡಾಧಿಕಾರಿಗಳ ಇಲಾಖೆ, ಸಿಡಿಪಿಓ ಇಲಾಖೆ ಅಬಕಾರಿ ಇಲಾಖೆ, ಎಲ್ಲ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದರು. ಬಳಿಕ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಾಯಿತು.ಕೊಪ್ಪ ತಾಂಡಾದಲ್ಲಿ ಪಡಿತರ ವಿತರಣೆ ಮಾಡಲು 10 ರೂ ಪಡೆಯುತ್ತಿರುವ ಬಗ್ಗೆ ದೂರು ಅರ್ಜಿ ವಿನಾಯಕ ಕುಲಕರ್ಣಿ ಮುದ್ದೇಬಿಹಾಳ ಉದ್ಯಾನವನದಲ್ಲಿ ದೇವಸ್ಥಾನ ನಿರ್ಮಾಣದ ಬಗ್ಗೆ ಮತ್ತು ಕಾಳಗಿ ಗ್ರಾಮದ ಸಾರ್ವಜನಿಕರು ಉತಾರ ನೀಡುವ ಬಗ್ಗೆ ಅರ್ಜಿ ಸಲ್ಲಿಸಿದರು.

ಡಿವೈಎಸ್ಪಿ ಸುರೇಶ ರಡ್ಡಿ , ಇನಸ್ಪೇಕ್ಟರ್‌ಗಳಾದ ಆನಂದ ಟಕ್ಕನ್ನವರ, ಆನಂದ ಘೋಣಿ, ತಹಶಿಲ್ದಾರ ಬಸವರಾಜ ನಾಗರಾಳ ಸೇರಿದಂತೆ ಎಲ್ಲ ಸರಕಾರಿ ಅಧಿಕಾರಿಗಳು ಇದ್ದರು.



## ವಿಶ್ವ ಕನ್ನಡ ಹಬ್ಬ'ಕ್ಕೆ ಖ್ಯಾತ ಸಂಗೀತ ನಿರ್ದೇಶಕರಾದ ಗುರುಕಿರಣ್ ರವರಿಗೆ ಆಹ್ವಾನ..

"ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್" ಸಂಸ್ಥೆ ಸಿಂಗಾಪುರದಲ್ಲಿ ಹಮ್ಮಿಕೊಂಡಿರುವ "ಎರಡನೇ ವಿಶ್ವ ಕನ್ನಡ ಹಬ್ಬ"ಕ್ಕೆ ಖ್ಯಾತ ಸಂಗೀತ ನಿರ್ದೇಶಕರಾದ ಗುರುಕಿರಣ್ ರವರನ್ನು ಭೇಟಿ ಮಾಡಿದ ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಕಾರ್ಯಕ್ರಮಕ್ಕೆ ಆಗಮಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷರಾದ ಶಿವಕುಮಾರ್ ನಾಗರ ನವಿಲೆಯವರು "ಎರಡನೇ ವಿಶ್ವ ಕನ್ನಡ ಹಬ್ಬ"ದ ಸಂಪೂರ್ಣ ರೂಪುರೇಶೆಗಳನ್ನು ವಿವರಿಸಿದರು. ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಂಸ್ಥೆಯ ಸಾಧನೆಗಳಿಗೆ ಶ್ಲಾಘನೀಯ ವ್ಯಕ್ತಪಡಿಸಿದ ಗುರುಕಿರಣ್ ರವರು , ಕನ್ನಡ ನಾಡು ನುಡಿಯನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿರುವ ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಂಸ್ಥೆಗೆ ನನ್ನ ಶುಭಾಶಯಗಳು. ಕಾಯ ೯ಕ್ರಮಕ್ಕೆ ನಾನು ಕೂಡ ಆಗಮಿಸಲಿದ್ದೇನೆ ಜೊತೆಗೆ ನಮ್ಮ ಸಹಕಾರ ಸದಾ ನಿಮ್ಮೊಂದಿಗಿದೆ. ಎಲ್ಲರೂ ಒಟ್ಟಾಗಿ ಕಾರ್ಯಕ್ರಮ ಯಶಸ್ವಿಗೊಳಿಸೋಣ ಎಂದರು. ಈ ಸಂದರ್ಭದಲ್ಲಿ ಗಾಯಕ ಮೋಹನ್ ಕೃಷ್ಣ, ಸೌದಿ ಅರೇಬಿಯಾ ರಿಯಾದ್ ನಗರ ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಸಂತೋಷ್ ಶೆಟ್ಟಿ, ಕಾವ್ಯ. ಆರ್ ಹಾಗೂ ರೇಣುಕಾನಂದರವರು ಜೊತೆಗಿದ್ದರು.



ಮಂತ್ರಾಲಯ ಶ್ರೀಗಳ ಅಧ್ಯಕ್ಷತೆ ಯಲ್ಲಿ ಶ್ರೀ ಗುರು ಸಾರ್ವಭೌಮ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ"ಸುಧಾ ಪರೀಕ್ಷೆ" ಬೆಂಗಳೂರು ನಗರದ ಪವಮಾನಪುರ ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮ ಪೂಜ್ಯ ಶ್ರೀ108 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಘನ ಅಧ್ಯಕ್ಷತೆಯಲ್ಲಿ ವೇದ ಘೋಷ ದೀಪ ಪ್ರಜ್ವಲನೆ ಮೂಲಕ ಸಭಾ ಸುಧಾ ಪರೀಕ್ಷೆ ಕಾರ್ಯಕ್ರಮ "ಉದ್ಘಾಟನೆ" ಮತ್ತು ಶ್ರೀ ಗುರು ಸಾರ್ವಭೌಮ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಶ್ರೀಗಳವರ ಸಮ್ಮುಖದಲ್ಲಿ ಪರೀಕ್ಷಾ ಕಾರ್ಯಕ್ರಮ , ಈ ಸಂದರ್ಭದಲ್ಲಿ ಶ್ರೀಮಠದ ಪಂಡಿತ ಕೇಸರಿ ರಾಜಾ ಎಸ್ ಗಿರಿ ಆಚಾರ್ಯರ ಉಪಸ್ಥಿತಿ, –ಮಂತ್ರಾಲಯ ಮಠದ ವಿದ್ಯಾರ್ಥಿಗಳಿಂದ, ಶ್ರೇಷ್ಠ ಪಂಡಿತರಿಂದ ಇವತ್ತು ಮತ್ತು ನಾಳೆ ಪವಮಾನಪುರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಯಲಿದೆ ಡಾಕ್ಟರ್ ಎನ್ ವಾದಿರಾಜ ಆಚಾರ್ಯ, ಸತ್ತಿಗೇರಿ ಧೀರೇಂದ್ರ ಆಚಾರ್ಯ, ತಿರುಮಲ ಕುಲಕರಣಿ ಆಚಾರ್ಯ , ಬಂಡಿ ಶಾಮಾಚಾರ್ಯ, ಡಿ ಧನಂಜಯಾಚಾರ್ಯ, ವೇಣುಗೋಪಾಲಾಚಾರ್ಯ, ಪವಚಾರ್ಯ ಮತ್ತು ಹಲವಾರು ಪಂಡಿತರು ಉಪಸ್ಥಿತಿ ಮಠದ ವಿದ್ಯಾರ್ಥಿಗಳು ಸಹಿತ ವಿದ್ವಾನ್ ಬಂಡ್ಯಾಚಾರ್ಯ, ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದಿಂದ್ರ ಆಚಾರ್ ಶ್ರೀಗಿರಿರಾಜ ಆಚಾರ್ ಹಾಗೂ ಕೃಷ್ಣಾಚಾರ್, ನಂದಕಿಶೋರ್ ಆಚಾರ್ ಇದ್ದರು,ನಾಳೆ ದಿನ ಶ್ರೀಪಾದರ ಪಟ್ಟಾಭಿಷೇಕೋತ್ಸವದ ಅಂಗವಾಗಿ ಸಂಜೆ 4–30ಕ್ಕೆ ಶ್ರೀಪಾದರ ಮೆರವಣಿಗೆ ಕಾರ್ಯಕ್ರಮ. ಡಾಕ್ಟರ್ ಎನ್ ವಾದಿರಾಜ ಆಚಾರ್ಯ, ಮತ್ತು ಹಲವಾರು ಪಂಡಿತರ ಉಪಸ್ಥಿತಿ.

# ಕೆ.ಆರ್.ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಧ್ಯಾಪಕರು ಕರ್ತವ್ಯ ಸಹಿ ಮಾಡಿ ಸಾಮೂಹಿಕವಾಗಿ ಬೀಗರೂಟಕ್ಕೆ ಹಾಜರು, ಸಾರ್ವಜನಿಕರ ಆಕ್ರೋಶ

ಕೆ.ಆರ್.ಪೇಟೆ ವರದಿ: ಅಧ್ಯಾಪಕರು ಎಂದರೆ ಶಿಸ್ತು, ಸಂಯಮ, ಕಲಿಸುವ ಗುರುಗಳು, ಆದರೆ ಗುರುಗಳೇ ದಾರಿ ತಪ್ಪಿದರೆ ವಿದ್ಯಾರ್ಥಿ ಸಮೂಹ ಏನಾಗಬಹುದು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ದಾಖಲಾತಿ ಮಾಡಿಸಲು ಬಂದ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೇ–22ರ ಬುಧವಾರವಾದ ಇಂದು ಕೆ.ಆರ್.ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕ ಸಿ.ರಮೇಶ್ ಅವರ ಮಗಳ ಮದುವೆಯ ಬೀಗರ ಔತಣ ಕೂಟಕ್ಕೆ ಕಾಲೇಜಿನ ಖಾಯಂ ಅಧ್ಯಾಪಕರುಗಳು ಸಾಮೂಹಿಕವಾಗಿ ಸಹಿ ಮಾಡಿ ಬಸ್ಸಿನಲ್ಲಿ ರಾಮನಗರ ಜಿಲ್ಲೆಯ ಬಿಡದಿಗೆ ಬೀಗರೂಟಕ್ಕೆ ತೆರಳಿದ್ದಾರೆ ಎಂದು ತಿಳಿದು ಬಂದಿದೆ. ಅಧ್ಯಾಪಕರುಗಳು ಯಾವುದೇ ರೀತಿಯ ರಜೆ ಅಥವಾ ಮೇಲಾಧಿಕಾರಿಗಳ ಅನುಮತಿಯನ್ನು ಪಡೆಯದೇ ಹಾಜರಾತಿ



ಪುಸ್ತಕಕ್ಕೆ ಸಹಿ ಮಾಡಿ ಕರ್ತವ್ಯದ ವೇಳೆಯಲ್ಲಿ ಖಾಸಗಿ ಕಾರ್ಯಕ್ರಮಕ್ಕೆ ನೂರಾರು ಕಿ.ಮೀ. ದೂರ ತೆರಳಿರುವುದು ಖಂಡನೀಯವಾದುದು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಧ್ಯಾಪಕರ ಸಾಮೂಹಿಕ ಗೈರುಹಾಜರಿಯ ಬಗ್ಗೆ ಕಛೇರಿಯ ವ್ಯವಸ್ಥಾಪಕರನ್ನು ಕೇಳಿದರೆ ನಮಗೆ ಈ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲ, ಅಧ್ಯಾಪಕರು ಸಹಿ ಮಾಡಿದ್ದಾರೋ ಇಲ್ಲವೋ ನನ್ನ ಗಮನಕ್ಕೆ ಬರುವುದಿಲ್ಲ ಕಾಲೇಜಿನ ಆಡಳಿತ ವ್ಯವಹಾರವನ್ನೆಲ್ಲಾ ಪ್ರಾಂಶುಪಾಲರೇ ನಿರ್ವಹಿಸುತ್ತಾರೆ. ಈ ಬಗ್ಗೆ ನನಗೆ ಯಾವುದೇ ರೀತಿಯ ಮಾಹಿತಿ ನೀಡಿಲ್ಲಾ. ಪ್ರಾಂಶುಪಾಲರು ಬಂದಾಗ ಅವರನ್ನೇ ಕೇಳಿ ಮಾಹಿತಿ ಪಡೆಯಿರಿ ಎಂದು ಕಾಲೇಜಿನ ವ್ಯವಸ್ಥಾಪಕಿ ಭುವನೇಶ್ವರಿ ತಿಳಿಸಿದ್ದಾರೆ.

ಅಧ್ಯಾಪಕರು ಕರ್ತವ್ಯ ಹಾಜರಿ ಪುಸ್ತಕಕ್ಕೆ ಸಾಮೂಹಿಕವಾಗಿ ಸಹಿ ಮಾಡಿ ಖಾಸಗಿ ಕಾರ್ಯಕ್ರಮಕ್ಕೆ ತೆರಳಿರುವ ಬಗ್ಗೆ ಮೈಸೂರಿನ ಪ್ರಾದೇಶಿಕ ಜಂಟಿ ನಿರ್ದೇಶಕರನ್ನು ಸಂಪರ್ಕಿಸಿದರೆ ಈ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ನೀವು ನಮಗೆ ಲಿಖಿತವಾಗಿ ದೂರು ನೀಡಿದರೆ ಖಂಡಿತವಾಗಿಯೂ ಕ್ರಮವಹಿಸುತ್ತೇನೆ ಎಂದಿದ್ದಾರೆ.



# ಟಾಟಾ ಮೋಟಾರ್ಸ್- ಬಜಾಜ್ ಫಿನ್‌ಕಾರ್ಪ್ ಒಡಂಬಡಿಕೆ ಘೋಷಣೆ

ಹುಬ್ಬಳ್ಳಿ: ಡೀಲರ್ಗಳ ಬಳಿ ಆರ್ಥಿಕ ನೆರವಿನ ಆಯ್ಕೆಗಳು ಮತ್ತು ಸುಲಭತೆಯನ್ನು ಸುಧಾರಿಸಲು ಟಾಟಾ ಮೋಟಾರ್ಸ್ ಅಂಗಸಂಸ್ಥೆಗಳಾದ ಟಾಟಾ ಮೋಟಾರ್ಸ್ ಪ್ಯಾಸೆಂಜರ್ ವೆಹಿಕಲ್ಸ್ (ಟಿಎಂಪಿವಿ) ಮತ್ತು ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ (ಟಿಪಿಇಎಂ) ಕಂಪೆನಿಗಳು ಬಜಾಜ್ ಫಿನ್ಸರ್ವ್ ಲಿಮಿಟೆಡ್‌ನ ಅಂಗವಾಗಿರುವ ಬಜಾಜ್ ಫೈನಾನ್ಸ್ ಜೊತೆಗೆ ಕೈ ಜೋಡಿಸಿದೆ. ಭಾರತದ ಮುಂಚೂಣಿಯ ಮತ್ತು ವೈವಿಧ್ಯಮಯ ಹಣಕಾಸು ಸೇವೆಗಳ ಸಮೂಹ ಕಂಪೆನಿಗಳಲ್ಲಿ




ಒಂದಾಗಿರುವ ಬಜಾಜ್ ಫೈನಾನ್ಸ್ ಈ ಮೂಲಕ ಪ್ಯಾಸೆಂಜರ್ ಮತ್ತು ಎಲೆಕ್ಟ್ರಿಕ್ ವಾಹನ ಡೀಲರ್ಗಳಿಗೆ ತನ್ನ ಸೇವೆಗಳನ್ನು ಇನ್ನಷ್ಟು ವಿಸ್ತರಿಸಿದೆ.

ಈ ತಿಳಿವಳಿಕೆ ಒಪ್ಪಂದದಿಂದಾಗಿ ಟಿಎಂಪಿವಿ ಮತ್ತು ಟಿಪಿಇಎಂನ ಡೀಲರ್ಗಳಿಗೆ ಅತ್ಯಂತ ಕಡಿಮೆ ಅಡಮಾನದಲ್ಲಿ ಬಜಾಜ್ ಫೈನಾನ್ಸ್ ಆರ್ಥಿಕ ನೆರವು ಒದಗಿಸಲಿದೆ.

ಟಿಪಿಇಎಂನ ಚೀಫ್ ಫೈನಾನ್ಷಿಯಲ್ ಆಫೀಸರ್ ಮತ್ತು ಟಿಎಂಪಿವಿಯ ನಿರ್ದೇಶಕರಾದ ಧೀಮನ್ ಗುಪ್ತಾ ಮತ್ತು ಬಜಾಜ್ ಫೈನಾನ್ಸ್ ಲಿಮಿಟೆಡ್ನ ಚೀಫ್ ಬಿಸಿನೆಸ್ ಆಫೀಸರ್ ಸಿದ್ಧಾರ್ಥ ಭಟ್ ಒಪ್ಪಂದಕ್ಕೆ ಸಹಿ ಮಾಡಿದರು.

ಸಹಯೋಗದ ಕುರಿತು ಮಾತನಾಡಿದ ಟಿಪಿಇಎಂನ ಚೀಫ್ ಫೈನಾನ್ಷಿಯಲ್ ಆಫೀಸರ್ ಮತ್ತು ಟಿಎಂಪಿವಿಯ ನಿರ್ದೇಶಕರಾದ ಧೀಮನ್ ಗುಪ್ತಾ ಅವರು "ನಮ್ಮ ಡೀಲರ್ ಪಾಲುದಾರರು ನಮ್ಮ ವಹಿವಾಟಿನ ಅವಿಭಾಜ್ಯ ಅಂಗವಾಗಿದ್ದಾರೆ. ಅವರಿಗೆ ಸುಲಭವಾಗಿ ವಹಿವಾಟು ನಡೆಸಲು ಪೂರಕವಾದ ಪರಿಹಾರಗಳನ್ನು ಒದಗಿಸಲು ನಾವು ಸದಾ ಸಿದ್ಧರಿದ್ದೇವೆ. ಜೊತೆಯಾಗಿ ಮಾರುಕಟ್ಟೆಯಲ್ಲಿ ನಾವು ಬೆಳೆಯಬೇಕಾಗಿದೆ. ನಮ್ಮ "ನ್ಯೂ ಫಾರ್‌ಎವರ್" ಪೋರ್ಟ್ಫೋಲಿಯೋದಿಂದಾಗಿ ಗ್ರಾಹಕರ ಸಂಖ್ಯೆ ಹೆಚ್ಚುತ್ತಿದೆ.

ಈ ನಿಟ್ಟಿನಲ್ಲಿ ವಿವಿಧ ಹಣಕಾಸು ಪರಿಹಾರಗಳನ್ನು ಒದಗಿಸಲು ಬಜಾಜ್ ಫೈನಾನ್ಸ್ ಜೊತೆಗೆ ಕೈಜೋಡಿಸಲು ಖುಷಿಯಾಗುತ್ತಿದೆ. ಇದರಿಂದಾಗಿ ನಮ್ಮ ಡೀಲರ್ ಪಾಲುದಾರರಿಗೆ ದುಡಿಯುವ ಬಂಡವಾಳ ಹೆಚ್ಚಿಸಿಕೊಳ್ಳಲು ಸಹಾಯಕವಾಗಲಿದೆ" ಎಂದು ಹೇಳಿದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
23 THURSDAY MAY 2024
23 ಗುರುವಾರ ಮೇ 2024

# ಚಿತ್ರಮಂದಿರದಲ್ಲಿದ ಜಡ್ಜ್‌ಮೆಂಟ್ ಬಿಡುಗಡೆ

ಬೆಂಗಳೂರು: 'ದ ಜಡ್ಜ್‌ಮೆಂಟ್' ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡಿರುವುದು ಗುರುರಾಜ ಕುಲಕರ್ಣಿ. ಜಿ9 ಕಮ್ಯುನಿಕೇಶನ್ ಮೀಡಿಯಾ ಅಂಡ್ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಶರದ.ಬಿ.ನಾಡಗೌಡ, ವಿಶ್ವನಾಥ ಗುಪ್ತ, ರಾಮು ರಾಯಚೂರು, ರಾಜಶೇಖರ ಪಾಟೀಲ, ರಾಜೇಶ್ವರಿ.ಆರ್.ಸುನಿಲ ಮತ್ತು ಪ್ರತಿಮಾ ಬಿರಾದರ ಜಂಟಿಯಾಗಿ ನಿರ್ಮಾಣ ಮಾಡಿರುವುದು ಹೊಸ ಅನುಭವ. ಸಿ ಯೂ ಇನ್ ಕೋರ್ಟ್ ಎಂಬ ಅಡಿಬರಹವಿದೆ.

ಕ್ರೇಜಿಸ್ಟಾರ್ ರವಿಚಂದ್ರನ್ ವಕೀಲರಾಗಿ ಮುಖ್ಯ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಆರೋಪಿ ತಪ್ಪಿತಸ್ಥನೆಂದು ಭಾವಿಸಿ ಆತನಿಗೆ ಶಿಕ್ಷೆ ಕೊಡಿಸಲು ಮುಂದಾಗುತ್ತಾರೆ. ಮುಂದೆ ಆತ ನಿರಪರಾಧಿ ಎಂದು ತಿಳಿದು ಶಿಕ್ಷೆಯಿಂದ ತಪ್ಪಿಸಲು ಯಾವ ರೀತಿ



ವಾದ ಮಂಡಿಸುತ್ತಾರೆ ಎಂಬುದು ಒಂದು ಏಳೆಯ ಸಾರಾಂಶವಾಗಿದೆ. ಇದೊಂದು ಲೀಗಲ್ ಥ್ರಿಲ್ಲರ್ ಶೈಲಿಯಲ್ಲಿರುತ್ತದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ನಡೆಯುವ ಕೆಲ ಬೆಳವಣಿಗೆಗಳು ಮತ್ತು ಬದಲಾವಣೆಗಳ ಸುತ್ತ ಚಿತ್ರವು ಸಾಗುತ್ತದೆ. ವಿದೇಶದಿಂದ ಬಂದು ಯಾವುದೋ ಕಾರಣಕ್ಕೆ ಸಿಲುಕಿಕೊಳ್ಳುವ ಧನ್ಯಾರಾಮ್‌ಕುಮಾರ್, ರವಿಚಂದ್ರನ್

**ಕ್ರೇಜಿಸ್ಟಾರ್ ರವಿಚಂದ್ರನ್ ವಕೀಲರಾಗಿ ಮುಖ್ಯ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಆರೋಪಿ ತಪ್ಪಿತಸ್ಥನೆಂದು ಭಾವಿಸಿ ಆತನಿಗೆ ಶಿಕ್ಷೆ ಕೊಡಿಸಲು ಮುಂದಾಗುತ್ತಾರೆ. ಮುಂದೆ ಆತ ನಿರಪರಾಧಿ ಎಂದು ತಿಳಿದು ಶಿಕ್ಷೆಯಿಂದ ತಪ್ಪಿಸಲು ಯಾವ ರೀತಿ ವಾದ ಮಂಡಿಸುತ್ತಾರೆ ಎಂಬುದು ಒಂದು ಏಳೆಯ ಸಾರಾಂಶವಾಗಿದೆ. ಇದೊಂದು ಲೀಗಲ್ ಥ್ರಿಲ್ಲರ್ ಶೈಲಿಯಲ್ಲಿರುತ್ತದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ನಡೆಯುವ ಕೆಲ ಬೆಳವಣಿಗೆಗಳು ಮತ್ತು ಬದಲಾವಣೆಗಳ ಸುತ್ತ ಚಿತ್ರವು ಸಾಗುತ್ತದೆ.**

ಪತ್ನಿಯಾಗಿ ಮೇಘನಾಗಾಂವ್ಕರ್, ಶಿಕ್ಷೆಗೆ ಗುರಿಯಾಗುವ ದಿಗಂತ್ ಉಳಿದಂತೆ ಲಕ್ಷ್ಮೀಗೋಪಾಲಸ್ವಾಮಿ, ಟಿ.ಎಸ್.ನಾಗಾಭರಣ, ಪ್ರಕಾಶ್ ಬೆಳವಾಡಿ, ಕೃಷ್ಣಹೆಬ್ಬಾಳೆ, ರವಿಶಂಕರ ಗೌಡ, ರೇಖಾಕೂಡ್ಲಗಿ, ರೂಪರಾಯಪ್ಪ, ಮುಂತಾದವರು ಅಭಿನಯಿಸಿದ್ದಾರೆ. ಸಂಗೀತ ಅನೂಪ್‌ಸೀಳನ್, ಛಾಯಾಗ್ರಹಣ ಪಿ.ಕೆ.ಹೆಚ್.ದಾಸ್, ಸಂಕಲನ ಬಿ.ಎಸ್. ಕೆಂಪರಾಜು, ಸಂಭಾಷಣೆಗೆ ಎಂ.ಎಸ್. ರಮೇಶ್ ಪೆನ್ನು ಕೆಲಸ ಮಾಡಿದೆ. ಅಂದಹಾಗೆ ಚಿತ್ರವು ಇದೇ ಶುಕ್ರವಾರದಂದು ರಾಜ್ಯಾದ್ಯಂತ ತೆರೆಕಾಣುತ್ತಿದೆ.



## ಸ್ಥಳೀಯ

ಇ–ಪೇಪರ್: www.munjaneevartheepaper.com

## ಪಕ್ಷವು ನನ್ನ ಕಡೆ ಗಣಿಸಿ ಇತ್ತೀಚಿಗೆ ಬಂದ ವ್ಯಕ್ತಿಗೆ ಟಿಕೇಟ್ ಕೊಟ್ಟಿದ್ದು ನನಗೆ ಬೇಸರ ತಂದಿದೆ. ರಘುಪತಿ ಭಟ್ .

ಪಕ್ಷದಲ್ಲಿ ಕಳೆದ ಹಲವು ವರ್ಷಗಳ ಸುಧೀರ್ಘ ನನ್ನ ಜೀವವನ್ನು ಕಳೆದಿದ್ದೇನೆ ಸತತ ಮೂರು ಬಾರಿ ನಾನು ಉಡುಪಿ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ನನ್ನ ಮತ ಕ್ಷೇತ್ರದಲ್ಲಿ ಹಲವು ಉನ್ನತ ಕೆಲಸಗಳನ್ನು ಮಾಡಿದ್ದು ಇಂದಿಗು ಸಹ ನನ್ನ ಕ್ಷೇತ್ರದ ಜನ ನನ್ನನ್ನು ಮರೆತಿಲ್ಲ ಎಂದರು.ಕಳೆದ ಲೋಕಸಭಾ ಚುನಾವಣೆಯಲ್ಲಿ ನಾನು 42 ದಿನಗಳ ಕಾಲ ಬಿ.ಜೆ.ಪಿ.ಅಭ್ಯರ್ಥಿ ಪರ ಕೆಲಸ ಮಾಡಿದ್ದೇನೆ.ಪಕ್ಷವು ನನಗೆ ಕೊಟ್ಟ ಜವಾಬ್ದಾರಿ ಸಂಪೂರ್ಣ ನಿಭಾಯಿಸಿದ್ದು ಅದಕ್ಕೆ ನನಗೆ ತೃಪ್ತಿಯಿದೆ



ಎಂದರು.ನಾನು ಪಕ್ಷದ ಹಾಗೂ ಹಿಂದುತ್ವದ ಪರವಾಗಿ ಇರುವವನು ನಾನು ಹಿಜಾಬ್ ವಿರುದ್ದ ಹೋರಾಟದಲ್ಲಿ ಮುಂದೆ ಇದ್ದವನು ನಾನು ಇಗಲು ಬಿ.ಜೆ.ಪಿ.ಪಕ್ಷದಲ್ಲಿ ಇರುವವನು ಇದು ಚುನಾವಣೆ ಯಾವುದೇ ತರಹದ ಪಕ್ಷಕ್ಕೆ ತೊಂದರೆ ಆಗದೆ ಇರುವ ಚುನಾವಣೆ ಇದರಲ್ಲಿ ಯಾವುದೇ ಸರ್ಕಾರ ರಚನೆ ಆಗೊಲ್ಲ ಆ ಕಾರಣದಿಂದ ಪಕ್ಷವು ನನ್ನ ತರಹ ಅನೇಕರಿಗೆ ಮೂಲ ಬಿ.ಜೆ.ಪಿ.ಪಕ್ಷದ ಕಾರ್ಯಕರ್ತರಿಗೆ ಟಿಕೇಟ್ ನಿಡಿದರೆ ನನಗೆ ಅಬ್ಯಂತರ ಇರಲಿಲ್ಲ ಅದು ಬಿಟ್ಟು ಕಳೆದ ಒಂದುವರೆ ವರ್ಷದಲ್ಲಿ ಪಕ್ಷಕ್ಕೆ ಬಂದವರಿಗೆ ಟಿಕೇಟ್ ನಿಡಿದ್ದಕ್ಕೆ ನಾನು ನನ್ನ ಕಾರ್ಯಕರ್ತರ ಮತ್ತು ಸ್ನೇಹಿತರ ಅಭಿಮಾನಿಗಳ ಮಾತಿನಂತೆ ನಾನು ಇಂದು ಪಕ್ಷೇತರ ಅಭ್ಯರ್ಥಿಯಾಗಿ ಪದವಿದದರ ಕ್ಷೇತ್ರವನ್ನು ಪ್ರತಿನಿಧಿಸಿತ್ತಿಧೆನೆ ಎಂದರು..ಸ್ಪರ್ಧೆ ಇರುವುದು ನನ್ನ ಮತ್ತು ದಿನೇಶ್ ಅವರ ನಡುವೆ ಎಂದರು

ಅವರು ಇಂದು ಸಾಗರದ ವರದಶ್ರೀ ಸಭಾಂಗಣಸಲ್ಲಿ ಪತ್ರಕರ್ತರನ್ನು ಉದ್ದೇಶಶಿ ಮಾತಾನಾಡಿದರು..ನಂತರ ಸಾಗರದ ಹೆಸರಾಂತ ವಿದ್ಯಾ ಸಂಸ್ಥೆ ಎಲ್.ಬಿ.ಕಾಲೇಜಿನಲ್ಲಿ ಪ್ರಚಾರ ನಡೆಸಿ ಅಲ್ಲಿನ ಎಲ್ಲಾ ಉಪನ್ಯಾಸಕರಿಗು ತಮ್ಮ ಕರಪತ್ರ ಹಂಚುವ ಮೂಲಕ ಪ್ರಚಾರ ಮಾಡಿದರು..

ಈ ಸಂದರ್ಭದಲ್ಲಿ .ಕೆ.ವಿ .ಪ್ರವೀಣ್.ರಾಮಪ್ಪ. ಸುದರ್ಶನ.ಶಂಕರ..

ಪ್ರಕಾಶ್.ಚಂದ್ರಶೇಖರ್.ಲಿಂಗರಾಜ್ ಹಾಗೂ ಇನ್ನಿತರ ಮುಖಂಡರು ಹಾಜರಿದ್ದರು..

ವರದಿ.ರಾಘವೇಂದ್ರ ತಾಳಗುಪ್ಪ

## ಗರಗನಹಳ್ಳಿ ಗೇಟ್ ಅಪಘಾತ ಯುವಕ ಸಾವು

ಗುಂಡ್ಲುಪೇಟೆ: ಬೈಕ್ ಹಾಗೂ ಕಾರಿನ ನಡುವೆ ಅಪಘಾತ ಬೈಕ್ ಸವಾರನೋರ್ವ ಸಾವನ್ನಪ್ಪಿರುವ ಘಟನೆ ಗರಗನಹಳ್ಳಿ ಗೇಟ್ ಹತ್ತಿರ ನಡೆದಿದೆ.

ಆಲತ್ತೂರು ಕಡೆಯಿಂದ ದಡ್ಡದಹಳ್ಳಿಗೆ ತೆರಳುವಾಗ ಗರಗನಹಳ್ಳಿ ಗೇಟ್ ಹತ್ತಿರ ಬೈಕ್ ನಲ್ಲಿ ಬರುತ್ತಿದ್ದ ವೇಳೆ ಮೈಸೂರು ಕಡೆಯಿಂದ ವೇಗವಾಗಿ ಬಂದ ಕಾರು ಬೈಕ್ ಗೆ ಗುದ್ದಿದ ಪರಿಣಾಮ ಸವಾರನ ತಲೆ ಹಾಗೂ ಕೈ ಕಾಲಿಗೆ ತೀವ್ರತರವಾದ ಗಾಯಗಳಾಗಿದೆ

ತಾಲೂಕಿನ ಆಲುತ್ತೂರು ಗ್ರಾಮದ ಬೈಕ್ ಸವಾರ ಮಲ್ಲೇಶ್(23) ಮೃತ ಯುವಕ ಘಟನೆಯಿಂದ ಬೈಕ್ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರಿನ ಮುಂಭಾಗ ಜಖಂಗೊಂಡಿದೆ.

ಬೇಗೂರು ಪೊಲೀಸರು ಎರಡು ವಾಹನಗಳನ್ನು ವಶಕ್ಕೆ ಪಡೆದು ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ



## ಯಾವುದೇ ಕ್ಷಣದಲ್ಲಿ ಕಚೇರಿ ಮೇಲ್ಚಾವಣಿ ಬೀಳುವ ಅಪಾಯ...!

ವೀರೇಶ ಪ್ರಳಯಕಲ್ಮಠ

ಕುಂದಗೋಳ: ಯಾವುದೇ ಕ್ಷಣದಲ್ಲಿ ಸ್ಥಳಿಯ ತಹಶೀಲ್ದಾರ ಕಚೇರಿಯ ಮೇಲ್ಚಾವಣೆ ಬೀಳುವ ಹಂತದಲ್ಲಿದ್ದು ಒಂದೇ ಒಂದು ಕಬ್ಬಿಣ ತುಂಡಿನ ಆಧಾರದ ಮೇಲೆ ಜೋತಾಡುತ್ತಿರುವುದನ್ನು ತಾಲೂಕ ಆಡಳಿತ ಗಮನಿಸದೇ ಇರುವುದು ಭಾರೀ ಆತಂಕ ಮೂಡಿಸಿದೆ.

ತುಕ್ಕು ಹಿಡಿದಿರುವ ಮೇಲ್ಚಾವಣೆಯು ತಹಶೀಲ್ದಾರ ಕಚೇರಿಯ ಪ್ರವೇಶ ದ್ವಾರದ ಮೇಲಿದೆ. ಇದು ಯಾವುದೇ ಕ್ಷಣದಲ್ಲಿ ಕಳಚಿಕೊಂಡು ಬೀಳಲಿದ್ದು ಮುನ್ನೆಚ್ಚರಿಕೆ ವಹಿಸಬೇಕಾದ ತಾಲೂಕ ಆಡಳಿತ ಅಲ್ಲೊಂದು ದಾರಕಟ್ಟಿ ಸುಮ್ಮನಾಗಿದೆ. ಅಚ್ಚರಿ ಎಂದರೆ ನಿತ್ಯವೂ ನೂರಾರು ಸಾರ್ವಜನಿಕರು ಇದರತ್ತ



ಗಮನ ಹರಿಸಿಲ್ಲ. ಏಕೆಂದರೆ ಅವರಿಗದು ತಿಳಿಯದು.

1994 ರಲ್ಲಿ ಉದ್ಘಾಟನೆಗೊಂಡಿರುವ ಈ ಕಟ್ಟಡದ ಒಳಭಾಗ ಸಂಪೂರ್ಣ ಜೀರ್ಣಾವಸ್ಥೆಯಲ್ಲಿದೆ.ಮಳೆಗಾಲ ಪ್ರಾರಂಭವಾಗಿದ್ದು ಈ ಬಗ್ಗೆ ಮುನ್ನೆಚ್ಚರಿಕೆ ವಹಿಸದೇ ಇದ್ದಲ್ಲಿ ಅಪಾಯ ಗ್ಯಾರಂಟಿ.

ಚುನಾವಣಾ ನೀತಿ ಸಂಹಿತೆಯಲ್ಲಿಯೇ ಇನ್ನೂ ಕಾಲ ಕಳೆಯುತ್ತಿರುವ ತಾಲೂಕ ಆಡಳಿತಕ್ಕೆ ಪೂರ್ಣ ಪ್ರಮಾಣದ. ಅಧಿಕಾರಿಗಳು ಇಲ್ಲದಿರುವುದು ಮತ್ತಷ್ಟು ಗೋಜಲು ತಂದಿಟ್ಟದೆ.

ಕೋಟ್.

ಕಟ್ಟಡದ ಮೇಲ್ಭಾಗದಲ್ಲಿ ಸಂಪೂರ್ಣ ಜೀರ್ಣಗೊಂಡಿರುವ ಮೇಲ್ಚಾವಣೆ ಅಪಾಯದಲ್ಲಿದೆ. ಈ ಬಗ್ಗೆ ಜಿಲ್ಲಾಡಳಿತಕ್ಕೆ ವರದಿ ನೀಡಲಾಗಿದ್ದು ಈ ಬಗ್ಗೆ ಸಾರ್ವಜನಿಕ ರಿಗೆ ಮನವರಿಕೆ ಮಾಡಿಕೊಡುವ ಕಾರ್ಯವನ್ನು ಮಾಡುತ್ತೇವೆ.

– ಎಸ್.ಎಂ.ದಾನಣ್ಣವರ

– ಗ್ರೇಡ್ 2 ತಹಶೀಲ್ದಾರ ಕುಂದಗೋಳ

ಇದು ಯಾವುದೇ ಕ್ಷಣದಲ್ಲಿ ಮುಗುಚಿ ಬೀಳಲಿದೆ. ತಾಲೂಕ ಆಡಳಿತ ಮುನ್ನೆಚ್ಚರಿಕೆ ವಹಿಸದೇ ಇದ್ದಲ್ಲಿ ಅನಾಹುತವಾಗುವುದು ಗ್ಯಾರಂಟಿ. ತಕ್ಷಣ ತಾಲೂಕಿನ ಆಡಳಿತ ಈ ಬಗ್ಗೆ ಗಮನ ಹರಿಸಬೇಕು.

–––ಕಲ್ಲಪ್ಪ ಹರಕುಣಿ ಕ.ರ.ವೇ ಅದ್ಯಕ್ಷರು ಕುಂದಗೋಳ



## ಅದ್ದೂರಿಯಾಗಿ ನಡೆದ ಬಸವ ಜಯಂತಿ ಕಾರ್ಯಕ್ರಮ

ಮಾಲೂರು: ತಾಲ್ಲೂಕಿನ ಕಸಬಾ ಹೋಬಳಿಯ ಬೈರನಹಳ್ಳಿ ಗ್ರಾಮದಲ್ಲಿ ಶ್ರೀ ಬಸವ ಜಯಂತಿ ಕಾರ್ಯಕ್ರಮ ವೈಭವವಾಗಿ ಆಚರಿಸಲಾಯಿತು. ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಅಲಂಕಾರ ಮಾಡಲಾಗಿತ್ತು. ಬೆಳಿಗ್ಗೆಯಿಂದಲೇ ಅನೇಕ ದೈವಿಕ ಕೈಂಕರ್ಯಗಳು ನಡೆದವು. ದೇವರಿಗೆ ಪೂಜೆ, ಹವನ, ವಿಶೇಷ ಅಲಂಕಾರ ಸೇರಿದಂತೆ ಪ್ರಸಾದ ವಿನಿಯೋಗವು ನಡೆಯಿತು. ರಾತ್ರಿ ಅಗ್ನಿಗುಂಡವನ್ನು ಹಾಕಲಾಗಿತ್ತು. ಸೊಗಸಾಗಿ ಮೂಡಿಬಂದ ವೀರಗಾಸೆ ನೃತ್ಯ ಬಸವ ಜಯಂತಿಯ ಅಂಗವಾಗಿ ಹಮ್ಮಿಕೊಂಡಿದ್ದ ಬಿ. ಎಸ್.ನಾಗರಾಜ್ ಹಾಗೂ ವಿಜಯ್ ಕುಮಾರ್ ರವರ ವೀರಗಾಸೆ ಕಾರ್ಯಕ್ರಮವು ನೋಡುಗರ ಮನಸೋರೆಗೊಂಡಿತ್ತು. ಲಿಂಗಧೀರರ ವೇಷಭೂಷಣ, ನೃತ್ಯ, ವೀರಭದ್ರನ ಕಥೆಯ ಪ್ರಸಂಗ ಎಲ್ಲವೂ ಅದ್ಭುತವಾಗಿದ್ದವು. ಜೊತೆಗೆ ಗ್ರಾಮದಲ್ಲಿ ಅದ್ದೂರಿಯಾಗಿ ಪಲ್ಲಕ್ಕಿಗಳ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ಭೈರನಹಳ್ಳಿ, ತೊರ್ನಹಳ್ಳಿ, ಸೊಣ್ಣನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು. ವರದಿ:ಗೋಪಾಲಕೃಷ್ಣ, ಮಾಲೂರು(ಕೋಲಾರ)

## ಕಾವೇರಿ ನೀರಿನ ಬಗ್ಗೆ ಸಮರ್ಥ ನಿಲುವು ತಳೆಯಲು ಅಶೋಕ್

ಬೆಂಗಳೂರು: ಕಾವೇರಿ ನದಿ ನೀರಿಗೆ ಸಂಬಂಧಿಸಿ ರಾಜ್ಯ ಸರಕಾರವು ತನ್ನ ಸಮರ್ಥ ನಿಲುವನ್ನು ಕೋರ್ಟ್ ಮುಂದೆ ತಿಳಿಸಬೇಕಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಆಗ್ರಹಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ದುಡ್ಡು ಹೊಡೆಯೋಕೆ, ಲೂಟಿ ಮಾಡಲು ಈ ಸರಕಾರ ಸಮಯ ಕಳೆಯುತ್ತಿದೆ. ಕಾವೇರಿ ನೀರನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಕರ್ನಾಟಕದ ಕಾಂಗ್ರೆಸ್ ಸರಕಾರ ಮಾಡಿಲ್ಲ ಎಂದು ಟೀಕಿಸಿದರು. ಕೋರ್ಟ್, ಕಾವೇರಿ ಟ್ರಿಬ್ಯೂನಲ್‌ನಲ್ಲಿ ಪದೇಪದೇ ಹಿನ್ನಡೆ ಆಗುತ್ತಿದ್ದರೂ ಕೂಡ ಮುಖ್ಯಮಂತ್ರಿಗಳು ಸಭೆ ಕರೆದು ನಮ್ಮ ನಿಲುವನ್ನು ಕೋರ್ಟ್ ಮತ್ತು ಟ್ರಿಬ್ಯೂನಲ್‌ನಲ್ಲಿ ಮಂಡಿಸಲು ವ್ಯವಸ್ಥೆ ಮಾಡಿಲ್ಲ ಎಂದು ಆಕ್ಷೇಪಿಸಿದರು.

ಕಾವೇರಿ ಜಲಾನಯನ ಪ್ರದೇಶದ ರೈತರು ನಿರಂತರ ಹೋರಾಟ ಮಾಡಿದರೂ ಪ್ರಯೋಜನವಾಗಿಲ್ಲ. ರೈತರನ್ನು ಸರಕಾರ ಕಡೆಗಣಿಸುತ್ತಿದೆ ಎಂದು ತಿಳಿಸಿದ ಅವರು, ಈ ಬಗ್ಗೆ ಪ್ರಶ್ನಿಸಿದರೆ ದುರಹಂಕಾರದ ಮಾತನಾಡುತ್ತಾರೆ ಎಂದು ದೂರಿದರು.

ಶಾಸಕ ಹರೀಶ್ ಪೂಂಜ ಅವರ ಬಂಧನ ಪ್ರಯತ್ನ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಬಿಜೆಪಿ ಕಾರ್ಯಕರ್ತರ ಮೇಲಿನ ದೌರ್ಜನ್ಯ, ಹಿಂದೂ ಕಾರ್ಯಕರ್ತರ ಬಗೆಗಿನ ಸರಕಾರದ ಧೋರಣೆ ನಿಜಕ್ಕೂ ಅಕ್ಷಮ್ಯ. ಇದು ಖಂಡನೀಯ ಎಂದರಲ್ಲದೆ, ಇದೇಥರ ಮುಂದುವರೆದರೆ ಕಾಂಗ್ರೆಸ್ ಸರಕಾರ ಬಹಳ ದಿನ ಉಳಿಯುವುದಿಲ್ಲ ಎಂದೂ ಎಚ್ಚರಿಸಿದರು.

## ಅವೈಜ್ಞಾನಿಕ ಕೆರೆ ಏರಿ ಕಾಮಗಾರಿಯಿಂದ ಕೆರೆಯ ಏರಿ ಹೊಡೆಯುವ ಭೀತಿಗೆ ಒಳಗಾದ ಕೆರೆ ಏರಿ ಹಿಂಬದಿ ರೈತರು.

ಮಧುಗಿರಿ:– ತಾಲೂಕಿನ ಮಿಡಿಗೇಶಿ ಹೋಬಳಿ ರೆಡ್ಡಿಹಳ್ಳಿ ಗ್ರಾಮದ ಕೆರೆಯ ಏರಿಯ ಮಣ್ಣನ್ನು ತೆಗೆದು ಏರಿಯ ಮೇಲೆ ವಾಹನಗಳು ಓಡಾಡಲು ಸ್ಥಳೀಯ ಜನಪ್ರತಿನಿಧಿ ಒಬ್ಬರು ಅಕ್ರಮ ಕಾಮಗಾರಿ ನಡೆಸಿರುತ್ತಾರೆ. ಕೆರೆಯ ಹಿಂಭಾಗದ ರೈತರು ಅಕಸ್ಮಾತ್ ಕೆರೆಗೆ ನೀರು ಬಂದು ಕೆರೆ ಏರಿ ಹೊಡೆದರೆ ನಮ್ಮ ಜಮೀನುಗಳು ಕೊಚ್ಚಿ ಹೋಗುತ್ತವೆ ಎಂಬ ಆತಂಕದಲ್ಲಿ ಇದ್ದಾರೆ. ಕಾಮಗಾರಿ ನಡೆದ ಜಾಗದಲ್ಲಿ ಹನುಮಂತರಾಯಪ್ಪ ಎಂಬ ರೈತರ ಪಂಪ್ಸೆಟ್ ರೂಮಿನ ಬಳಿ ಬೇಲಿಗೆ ಬೆಂಕಿ ಇಟ್ಟಿದ್ದು ಆ ರೈತನ 15 ಸ್ಪಿಂಕ್ಲರ್ ಪೈಪುಗಳು ,ಮೋಟಾರ್ ಗೆ ಅಳವಡಿಸಿದ್ದ ಕೇಬಲ್ ,ಪೈಪ್ ಲೈನ್, ಗೇಟ್ ವಾಲ್ ಎಲ್ಲವೂ ಸುಟ್ಟು ಹೋಗಿವೆ ಕಾಮಗಾರಿಯಲ್ಲಿ ಯಾವುದೇ ಇಂಜಿನಿಯರ್ಗಳ ವೈಜ್ಞಾನಿಕ ಮಾಹಿತಿ ನೀಡದೆ, ಕಾಮಗಾರಿಯ ರೂಪುರೇಷೆಗಳನ್ನು ಮಾಡದೆ ಅಕ್ರಮವಾಗಿ ಈ ಕಾಮಗಾರಿಯನ್ನು ನಡೆಸಿರುತ್ತಾರೆ. ರೆಡ್ಡಿಹಳ್ಳಿ ಕೆರೆ ಹಿಂಭಾಗದ ರೈತರುಗಳು ಈಗಾಗಲೇ ಮುಂಗಾರು ಮಳೆ ಪ್ರಾರಂಭವಾಗಿದ್ದು ಮಳೆಗಾಲದಲ್ಲಿ ಕೆರೆ ತುಂಬಿ ಏರಿ ಒಡೆದು ಹೋಗುವ ಪರಿಸ್ಥಿತಿಯಲ್ಲಿ ಇದೆ ಎಂದು ಆತಂಕ ಪಡೆಯುತ್ತಿದ್ದಾರೆ



ಕಾಮಗಾರಿ ಮಾಡಿದ ನಾರ ಶಿವಣ್ಣ & ರಾಮಕೃಷ್ಣಯ್ಯ ನವರನ್ನು ನಮ್ಮಪತ್ರಿಕಾ ಪ್ರತಿನಿಧಿಗಳು ಮಾತನಾಡಿಸಿದಾಗ ನಾವು ಇಂಜಿನಿಯರ್ರ ಆದೇಶದಂತೆ ಕಾಮಗಾರಿ ಮಾಡಿರುತ್ತೇವೆ. ಮುಂದಿನ ದಿನಗಳಲ್ಲಿ ಏರಿಯ ಮೇಲೆ ಮಣ್ಣನ್ನು ಹೇರುವ ಕೆಲಸವನ್ನು ಮಾಡಿಸುತ್ತೇವೆ ಎಂದು ಭರವಸೆ ನೀಡಿದರು.

ಈಗಾಗಲೇ ರೆಡ್ಡಿಹಳ್ಳಿ ಕೆರೆಗೆ ಸ್ವಲ್ಪ ಮಳೆ ನೀರು ಬಂದಿದ್ದು ಮುಂದಿನ ದಿನಗಳಲ್ಲಿ ಕೆರೆ ತುಂಬುವ ಪರಿಸ್ಥಿತಿ ಇರುತ್ತದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ತುರ್ತಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ರೈತರ ಆತಂಕವನ್ನು ದೂರ ಮಾಡಬೇಕೆಂದು

ರೆಡ್ಡಿಹಳ್ಳಿ ಗ್ರಾಮಸ್ಥರು ಹಾಗೂ ರೈತರು ಪತ್ರಿಕೆ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಬಾಕ್ಸ್ ಬಳಸಿ

ನಮ್ಮ ಪ್ರತಿನಿಧಿಗಳು ಇಂಜಿನಿಯರ್ ಫೈರೋಜ್ ಅವರನ್ನು ಸಂಪರ್ಕಿಸಿದಾಗ ಇದು ತಾಲೂಕು ಪಂಚಾಯಿತಿ ಅನಿಬರ್ಂಧಿತ ಅನುದಾನದಡಿಯಲ್ಲಿ ಕೆಲಸ ಕೈಗೊಂಡಿದ್ದು ಇನ್ನು 15 ದಿನಗಳೊಳಗೆ ಕಾಮಗಾರಿಯನ್ನು ಪುನಃ ಪ್ರಾರಂಭಿಸಿ ವಾರದ ಒಳಗೆ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ್ದಾರೆ.

ಇಂಜಿನಿಯರ್ ಫೈರೋಜ್ ಹೇಳಿದಂತೆ 15 ದಿನಗಳೊಳಗೆ ಕೆಲಸ ಪ್ರಾರಂಭಿಸಿದರೆ ಅಷ್ಟು ದಿನಗಳೊಳಗೆ ಮಳೆ ಬಂದು ಕೆರೆ ಏರಿ ಹೊಡೆದರೆ ಅದರಿಂದ ಉಂಟಾಗುವ ನಷ್ಟಕ್ಕೆ ಯಾರು ಹೊಣೆಯಾಗುತ್ತಾರೆ. ಸರ್ಕಾರವೇ.....? ಇಂಜಿನಿಯರ್ಗಳೇ.......?

ನಾಗರಾಜ್ ರೆಡ್ಡಿಹಳ್ಳಿ.

ಈ ಕಾಮಗಾರಿಯಿಂದ ನಮ್ಮ ಮರಗಳು ಮತ್ತು ಕೇಬಲ್ ಟ್ರಿಪ್ ಪೈಪ್ ಗಳು ಸುಟ್ಟು ಹೋಗಿವೆ ಇದರ ನಷ್ಟ ಯಾರು ಬರಿಸುತ್ತಾರೆ ನಮಗೆ ಇದರ ನಷ್ಟವನ್ನು ತುಂಬಿಕೊಡಲೇಬೇಕು.

ಪಿ ಹನುಮಂತರಾಯಪ್ಪ ರೆಡ್ಡಿಹಳ್ಳಿ ಗ್ರಾಮಸ್ಥ.

ಕೆರೆಗೆ ನೀರು ಬಂದಿರುವುದರಿಂದ ಕೆರೆ ಏರಿಗೆ ಎಲ್ಲಿಂದ ಮಣ್ಣು ತರುತ್ತಾರೆ ಮುಂಚೆಯಾಗಿದ್ದರೆ ಕೆರೆಯ ಹೂಳು ತೆಗೆದಂತೆ ಆಗುತ್ತಿತ್ತು ಈಗ ದೂರದಿಂದ ಮಣ್ಣು ತೊಂದರೆ ಕೆರೆಗೆ ನಷ್ಟವಲ್ಲವೇ.....?

ಪುಟ್ಟ ಮಲ್ಲೇಶ್ ಗೌಡರು ರೆಡ್ಡಿಹಳ್ಳಿ .

MUNJANEVARTHE KANNADA DAILY, EDITOR, PRINTER PUBLISHED And OWNED BY H.L.Amaranth, and Printed at: Sree Manjunatha enterprises, No.30Subbannachan Lane 1st Cross, Cottenpet Bangalore-560053, MOB: **91414 14119** Published at: No.97, 2nd Cross, Vivekananda Nagar, Khadi commision layout, BSK 3rd Stage, Katharaguppe Main Road, Bangalore 560085